सत्यमेव जयते

# ಲೆಕ್ಕ ಪತ್ರ – ಒಂದು ವಿಹಂಗಮ ನೋಟ

# 2016-17

ಕರ್ನಾಟಕ ಸರ್ಕಾರ

## ಪ್ರಸ್ತಾವನೆ

ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯ, ಅಧಿಕಾರ ಮತ್ತು ಸೇವಾನಿಯಮಗಳು) ಅಧಿನಿಯಮ 1971ರ ಅಧಿಕಾರದನ್ವಯ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ನಿರ್ದೇಶನಗಳ ಮೇರೆಗೆ ಕರ್ನಾಟಕ ರಾಜ್ಯ ಸರ್ಕಾರದ ವಾರ್ಷಿಕ ಲೆಕ್ಕ ಪತ್ರಗಳನ್ನು ರಾಜ್ಯದ ವಿಧಾನಮಂಡಲದಲ್ಲಿ ಸಾದರ ಪಡಿಸುವ ಸಲುವಾಗಿ ತಯಾರಿಸಿ, ಪರಿಶೋಧಿಸಲಾಗುವುದು. ರಾಜ್ಯ ಸರ್ಕಾರದ ವಾರ್ಷಿಕ ಲೆಕ್ಕಗಳು (ಅ) ಹಣಕಾಸು ಲೆಕ್ಕಗಳು ಮತ್ತು (ಆ) ಧನವಿನಿಯೋಗ ಲೆಕ್ಕಗಳನ್ನು ಒಳಗೊಂಡಿರುತ್ತವೆ.

ಹಣಕಾಸು ಲೆಕ್ಕಗಳು ಸಂಚಿತ ನಿಧಿ, ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳ ಸಾರಾಂಶದ ವಿವರಣಾಪಟ್ಟಿಗಳನ್ನು ಒಳಗೊಂಡಿರುತ್ತವೆ. ಧನವಿನಿಯೋಗ ಲೆಕ್ಕಗಳು ರಾಜ್ಯ ವಿಧಾನಮಂಡಲವು ಅನುಮೋದಿಸಿದ ಅವಕಾಶಗಳಿಗೆ ಪ್ರತಿಯಾಗಿ ಅನುದಾನವಾರು ವೆಚ್ಚಗಳ ಮೊತ್ತವನ್ನು ದಾಖಲಿಸುತ್ತವೆ ಹಾಗೂ ಒದಗಿಸಿದ ಮೊತ್ತಗಳಿಗೂ ಮತ್ತು ವಾಸ್ತವ ವೆಚ್ಚಗಳಿಗೂ ನಡುವಿನ ವ್ಯತ್ಯಾಸಗಳಿಗೆ ವಿವರಣೆಯನ್ನು ನೀಡುತ್ತದೆ.

ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ರಾಜ್ಯದ ಹಣಕಾಸು ಲೆಕ್ಕ ಮತ್ತು ಧನವಿನಿಯೋಗ ಲೆಕ್ಕಗಳನ್ನು ಸಿದ್ಧಪಡಿಸುತ್ತಾರೆ.

ರಾಜ್ಯದ ಹಣಕಾಸು ಲೆಕ್ಕಗಳು, ಧನವಿನಿಯೋಗ ಲೆಕ್ಕಗಳು, ರಾಜ್ಯದ ಹಣಕಾಸಿನ ವ್ಯವಹಾರಗಳ ಮೇಲಿನ ವರದಿ ಮತ್ತು "ಲೆಕ್ಕ ಪತ್ರ–ಒಂದು ವಿಹಂಗಮ ನೋಟ" – ಇವುಗಳ ಒಟ್ಟು ಓದುವಿಕೆಯು, ಕರ್ನಾಟಕ ಸರ್ಕಾರದ ಹಣಕಾಸು ವಹಿವಾಟಿನ ವಿವಿಧ ಮುಖಗಳ ಪರಿಣಾಮಕಾರಿ ಗ್ರಹಿಕೆಗೆ ಸಹಾಯ ಮಾಡುತ್ತದೆ. "ಲೆಕ್ಕಪತ್ರ – ಒಂದು ವಿಹಂಗಮ ನೋಟ"ವು ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳಲ್ಲಿ ಬಿಂಬಿತವಾಗಿರುವಂತೆ ರಾಜ್ಯ ಸರ್ಕಾರದ ಚಟುವಟಿಕೆಗಳ ಒಂದು ಸ್ಥೂಲನೋಟವನ್ನು ನೀಡುತ್ತದೆ. ಈ ಮಾಹಿತಿಯನ್ನು ಸಂಕ್ಷಿಪ್ತ ವಿವರಣೆಗಳು, ಕೋಷ್ಟಕಗಳು ಮತ್ತು ನಕ್ಷೆಗಳ ಮೂಲಕ ವಿಶದಪಡಿಸಲಾಗಿದೆ.

ಈ ಭಾಷಾಂತರಿಸಿದ ಆವೃತ್ತಿಯಲ್ಲಿನ ಯಾವುದೇ ಸಂದೇಹಗಳಿಗೆ, ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

ಈ ಪ್ರಕಟಣೆಯನ್ನು ಉತ್ತಮಗೊಳಿಸುವ ದಿಶೆಯಲ್ಲಿ ತಮ್ಮ ಅಮೂಲ್ಯವಾದ ಸಲಹೆ ಸೂಚನೆಗಳಿಗೆ ಸದಾ ಸ್ವಾಗತವಿದೆ.

R Naresh

**(ಆರ್.ನರೇಶ್)**

ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ)

ಕರ್ನಾಟಕ

ಸ್ಥಳ: ಬೆಂಗಳೂರು

ದಿನಾಂಕ: 24 ಜನವರಿ 2018

# ಪರಿವಿಡಿ


| | | ಪುಟ ಸಂಖ್ಯೆ |
|---|---|---|
| ಅಧ್ಯಾಯ–I | ಪಕ್ಷಿ ನೋಟ | |
| **1.1** | **ಪೀಠಿಕೆ** | 1 |
| **1.2** | **ಲೆಕ್ಕಗಳ ವಿನ್ಯಾಸ** | 1 |
| 1.2.1 | ಸರ್ಕಾರದ ಲೆಕ್ಕಗಳ ಭಾಗಗಳು | 1 |
| 1.2.2 | ಲೆಕ್ಕಗಳ ಸಂಕಲನ | 2 |
| **1.3** | **ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು** | 2 |
| 1.3.1 | ಹಣಕಾಸು ಲೆಕ್ಕಗಳು | 2 |
| 1.3.2 | ಧನವಿನಿಯೋಗ ಲೆಕ್ಕಗಳು | 3 |
| **1.4** | **ನಿಧಿಗಳ ಆಕರಗಳು ಮತ್ತು ಅನ್ವಯಗಳು** | 4 |
| 1.4.1 | ಅರ್ಥೋಪಾಯ ಮುಂಗಡಗಳು | 4 |
| 1.4.2 | ನಿಧಿಗಳ ಹರಿವಿನ ವಿವರಣೆ | 4 |
| 1.4.3 | ರಾಜಸ್ವದ ಆಕರಗಳು | 6 |
| 1.4.4 | ವೆಚ್ಚದ ಉದ್ದೇಶ | 6 |
| **1.5** | **ಲೆಕ್ಕಗಳ ಮುಖ್ಯಾಂಶಗಳು** | 7 |
| **1.6** | **ಕೊರತೆ ಮತ್ತು ಹೆಚ್ಚಳಗಳ ವ್ಯಾಖ್ಯೆ** | 7 |
| 1.6.1 | ರಾಜಸ್ವ ಹೆಚ್ಚಳದ ಪ್ರವೃತ್ತಿ | 9 |
| 1.6.2 | ವಿತ್ತೀಯ ಕೊರತೆಯ ಪ್ರವೃತ್ತಿ | 9 |
| 1.6.3 | ಸರ್ಕಾರದ ಲೆಕ್ಕಗಳು | 10 |
| 1.6.4 | ಸಾಲದ ಮೊತ್ತಗಳಲ್ಲಿ ಬಂಡವಾಳ ವೆಚ್ಚಕ್ಕೆ ಬಳಸಿದ ಪ್ರಮಾಣ | 10 |
| ಅಧ್ಯಾಯ–II | ಸ್ವೀಕೃತಿಗಳು | |
| **2.1** | **ಪೀಠಿಕೆ** | 11 |
| **2.2** | **ರಾಜಸ್ವ ಸ್ವೀಕೃತಿಗಳು** | 11 |
| 2.2.1 | ರಾಜಸ್ವ ಸ್ವೀಕೃತಿಗಳ ಅಂಶಗಳು | 12 |
| 2.2.2 | ಆದಾಯದ ಪ್ರಮುಖ ಮೂಲಗಳು | 12 |
| **2.3** | **ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ** | 13 |
| 2.3.1 | ತೆರಿಗೆ ರಾಜಸ್ವದ ಅಂಶಗಳು | 14 |
| **2.4** | **ರಾಜ್ಯದ ತೆರಿಗೆಯ ಸಂಗ್ರಹದ ನಿರ್ವಹಣೆ** | 15 |
| **2.5** | **ತೆರಿಗೆ ಸಂಗ್ರಹದ ದಕ್ಷತೆ** | 15 |
| **2.6** | **ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲಿನ ಪ್ರವೃತ್ತಿ** | 16 |
| **2.7** | **ಸಹಾಯಾನುದಾನ ಮತ್ತು ವಂತಿಗೆಗಳು** | 16 |
| **2.8** | **ಸಾರ್ವಜನಿಕ ಋಣ** | 17 |
| ಅಧ್ಯಾಯ–III | ವೆಚ್ಚಗಳು | |
| **3.1** | **ಪೀಠಿಕೆ** | 18 |
| **3.2** | **ರಾಜಸ್ವ ವೆಚ್ಚ** | 18 |
| 3.2.1 | ರಾಜಸ್ವ ವೆಚ್ಚದ ವಿಭಾಗವಾರು ಹಂಚಿಕೆ | 19 |
| 3.2.2 | ವಿಭಾಗವಾರು ರಾಜಸ್ವ ವೆಚ್ಚದ ಸಂಯೋಜನೆಯ ಪ್ರವೃತ್ತಿ | 19 |
| 3.2.3 | ವೆಚ್ಚದ ಪ್ರಮುಖ ಉಪವಿಭಾಗಗಳ ವೆಚ್ಚಗಳು | 20 |
| **3.3** | **ಬಂಡವಾಳ ವೆಚ್ಚ** | 20 |
| 3.3.1 | ಬಂಡವಾಳ ವೆಚ್ಚದ ವಿಭಾಗವಾರು ವಿತರಣೆ | 21 |
| 3.3.2 | ಬಂಡವಾಳ ವೆಚ್ಚದ ಪ್ರವೃತ್ತಿ | 21 |

# ಪರಿವಿಡಿ



| | | ಪುಟ ಸಂಖ್ಯೆ |
|---|---|---|
| ಅಧ್ಯಾಯ–IV | ಯೋಜನೆ ಮತ್ತು ಯೋಜನೇತರ ವೆಚ್ಚ | |
| **4.1** | **ವೆಚ್ಚದ ಹಂಚಿಕೆ** | 22 |
| **4.2** | **ಯೋಜನಾ ವೆಚ್ಚ** | 22 |
| 4.2.1 | ಬಂಡವಾಳ ಲೆಕ್ಕದಡಿ ಯೋಜನಾ ವೆಚ್ಚ | 23 |
| **4.3** | **ಯೋಜನೇತರ ವೆಚ್ಚ** | 24 |
| **4.4** | **ಬದ್ಧ ವೆಚ್ಚಗಳು** | 25 |
| ಅಧ್ಯಾಯ–V | ಧನವಿನಿಯೋಗ ಲೆಕ್ಕಗಳು | |
| **5.1** | **ಧನವಿನಿಯೋಗ ಲೆಕ್ಕಗಳ ಸಾರಾಂಶ** | 26 |
| 5.1.1 | ಉಳಿತಾಯ / ಹೆಚ್ಚಳಗಳ ಅನುದಾನವಾರು ವಿವರಗಳು | 26 |
| **5.2** | **ಉಳಿತಾಯ ಪ್ರವೃತ್ತಿ** | 27 |
| **5.3** | **ಮಹತ್ವದ ಉಳಿತಾಯಗಳು** | 29 |
| **5.4** | **ಪೂರಕ ಅಂದಾಜುಗಳು** | 30 |
| ಅಧ್ಯಾಯ–VI | ಆಸ್ತಿ ಮತ್ತು ಜವಾಬ್ದಾರಿಗಳು | |
| **6.1** | **ಆಸ್ತಿಗಳು** | 32 |
| **6.2** | **ಋಣ ಮತ್ತು ಜವಾಬ್ದಾರಿಗಳು** | 32 |
| 6.2.1 | ರಾಜ್ಯ ಭವಿಷ್ಯ ನಿಧಿ | 34 |
| 6.2.2 | ಸರ್ಕಾರಿ ಜವಾಬ್ದಾರಿಗಳ ಪ್ರವೃತ್ತಿ | 34 |
| 6.2.3 | ಸಾದಿಲ್ವಾರು ನಿಧಿ | 35 |
| **6.3** | **ಖಾತರಿಗಳು** | 36 |
| **6.4** | **ಬಾಹ್ಯ ಬೆಂಬಲಿತ ಯೋಜನೆಗಳು** | 36 |
| ಅಧ್ಯಾಯ–VII | **ಇತರೆ ವಿಷಯಗಳು** | |
| **7.1** | **ಸಾರ್ವಜನಿಕ ಋಣದಡಿ ವ್ಯತಿರಿಕ್ತ ಶಿಲ್ಕುಗಳು** | 37 |
| **7.2** | **ರಾಜ್ಯ ಸರ್ಕಾರ ನೀಡಿದ ಸಾಲ ಮತ್ತು ಮುಂಗಡಗಳು** | 37 |
| **7.3** | **ಸ್ಥಳೀಯ ಸಂಸ್ಥೆಗಳು ಮತ್ತು ಇತರರಿಗೆ ನೀಡಿದ ಆರ್ಥಿಕ ಬೆಂಬಲ** | 37 |
| 7.3.1 | ಬಳಕೆ ಪ್ರಮಾಣ ಪತ್ರಗಳ ಸಲ್ಲಿಕೆ | 38 |
| **7.4** | **ನಗದು ಶಿಲ್ಕು ಮತ್ತು ನಗದು ಶಿಲ್ಕಿನ ಹೂಡಿಕೆಗಳು** | 38 |
| **7.5** | **ಲೆಕ್ಕಗಳ ಹೊಂದಾಣಿಕೆ** | 38 |
| **7.6** | **ಖಜಾನೆಗಳಿಂದ ಲೆಕ್ಕಗಳ ಸಲ್ಲಿಕೆ** | 39 |
| **7.7** | **ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳು ಮತ್ತು ಪಾವತಿಗಲ್ಲದ ಸವಿವರ ಸಾದಿಲ್ವಾರು ಬಿಲ್ಲುಗಳು** | 39 |
| **7.8** | **ಅಪೂರ್ಣ ಕಾಮಗಾರಿಗಳ ಮೇಲಿನ ಬದ್ಧತೆಗಳು** | 39 |

# ಅಧ್ಯಾಯ–I

## ಪಕ್ಷಿ ನೋಟ

### 1.1 ಪೀಠಿಕೆ

ಕರ್ನಾಟಕ ರಾಜ್ಯ ಸರ್ಕಾರದ ಸ್ವೀಕೃತಿ ಮತ್ತು ವಿತರಣೆಗಳ ಲೆಕ್ಕವನ್ನು ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ) ಕರ್ನಾಟಕ ಇವರು ಸಂಕಲಿಸುತ್ತಾರೆ. ಈ ಸಂಕಲಿತ ಸ್ವೀಕೃತಿ ಮತ್ತು ವಿತರಣೆ ಲೆಕ್ಕಗಳು ಜಿಲ್ಲಾ ಖಜಾನೆಗಳು ಸಲ್ಲಿಸಿದ ಮಾಸಿಕ ಆರಂಭಿಕ ಲೆಕ್ಕಗಳು, ಲೋಕೋಪಯೋಗಿ ಮತ್ತು ಅರಣ್ಯ ವಿಭಾಗಗಳು, ಇತರ ಲೆಕ್ಕ ಸಲ್ಲಿಸುವ ಕಛೇರಿಗಳು ಸಲ್ಲಿಸಿದ ಲೆಕ್ಕಗಳು ಹಾಗೂ ಭಾರತೀಯ ರಿಜರ್ವ್ ಬ್ಯಾಂಕ್–ಕೇಂದ್ರೀಯ ಲೆಕ್ಕ ವಿಭಾಗ, ನಾಗಪುರ, ಇವರು ನೀಡಿದ ತೀರುವಳಿ ಮೆಮೋ ಮತ್ತು ಕಾಲ ಕಾಲಕ್ಕೆ ಕರ್ನಾಟಕ ಸರ್ಕಾರವು ಹೊರಡಿಸಿದ ನಗದು ಹೊರಹರಿವು ಇಲ್ಲದ ಆದೇಶಗಳನ್ನು ಆಧರಿಸಿದೆ. ಈ ಸಂಕನಲದ ನಂತರ ಮಹಾಲೇಖಪಾಲರು (ಲೆಕ್ಕ ಮತ್ತು ಹಕ್ಕುದಾರಿ), ವಾರ್ಷಿಕ ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳನ್ನು ಸಿದ್ಧಪಡಿಸುತ್ತಾರೆ. ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ಸೇವೆಗಳ ಲೆಕ್ಕ ಪರಿಶೋಧನೆ), ಕರ್ನಾಟಕ, ಇವರ ಲೆಕ್ಕ ಪರಿಶೋಧನೆ ಮತ್ತು ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ದೃಢೀಕರಣದ ನಂತರ ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸಲಾಗುವುದು.

### 1.2 ಲೆಕ್ಕಗಳ ವಿನ್ಯಾಸ

*1.2.1 ಸರ್ಕಾರದ ಲೆಕ್ಕಗಳ ಭಾಗಗಳು.*

| | |
|---|---|
| **ಭಾಗ – 1**<br>**ಸಂಚಿತ ನಿಧಿ** | ರಾಜಸ್ವ ಮತ್ತು ಬಂಡವಾಳ ಲೆಕ್ಕದ ಸ್ವೀಕೃತಿಗಳು ಮತ್ತು ವೆಚ್ಚ, ಸಾರ್ವಜನಿಕ ಋಣ ಮತ್ತು ಸಾಲಗಳು ಮತ್ತು ಮುಂಗಡಗಳು, ಅಂತರರಾಜ್ಯ ಹೊಂದಾಣಿಕೆ ಮತ್ತು ಸಾದಿಲ್ವಾರು ನಿಧಿಗೆ ವಿನಿಯೋಗ ಲೆಕ್ಕಗಳನ್ನು ಒಳಗೊಂಡಿದೆ. |
| **ಭಾಗ – 2**<br>**ಸಾದಿಲ್ವಾರು ನಿಧಿ** | ಆಯವ್ಯಯದಲ್ಲಿ ಸೇರಿರದ ಅನಿರೀಕ್ಷಿತ ವೆಚ್ಚಗಳನ್ನು ಭರಿಸಲು ಸ್ಥಾಪಿಸಲಾಗಿದೆ. ಈ ನಿಧಿಯಿಂದ ಮಾಡಿದ ವೆಚ್ಚವನ್ನು ಅದೇ ಆರ್ಥಿಕ ವರ್ಷದಲ್ಲಿ ಆಂತರಿಕ ವರ್ಗಾವಣೆಯ ಮೂಲಕ ಅಥವಾ ಮುಂದಿನ ಆರ್ಥಿಕ ವರ್ಷದಲ್ಲಿ ಸಂಚಿತ ನಿಧಿಗೆ ಹೊಸ ಖಚಿನ ಮೂಲಕ ಪುನರ್ಭರ್ತಿ ಮಾಡಲಾಗುವುದು. |
| **ಭಾಗ – 3**<br>**ಸಾರ್ವಜನಿಕ ಲೆಕ್ಕ** | ಸಣ್ಣ ಉಳಿತಾಯ ಮತ್ತು ಭವಿಷ್ಯ ನಿಧಿಗಳು, ಮೀಸಲು ನಿಧಿಗಳು, ಠೇವಣಿಗಳು ಮತ್ತು ಮುಂಗಡಗಳು ಅಮಾನತ್ತು ಮತ್ತು ಇರಸಾಲು ವಹಿವಾಟುಗಳನ್ನು ಒಳಗೊಂಡಿದೆ. ಸಣ್ಣ ಉಳಿತಾಯ ಮತ್ತು ಭವಿಷ್ಯ ನಿಧಿ, ಮೀಸಲು ನಿಧಿ ಮತ್ತು ಠೇವಣಿಗಳು ಸರ್ಕಾರದ ಪುನರ್ಪಾವತಿಯ ಜವಾಬ್ದಾರಿಗಳಾದರೆ, ಮುಂಗಡಗಳು ಸರ್ಕಾರಕ್ಕೆ ಜಮೆಯಾಗಬೇಕಾದುದನ್ನು ಸೂಚಿಸುತ್ತವೆ. ಅಮಾನತ್ತು ಮತ್ತು ಇರಸಾಲು ವಹಿವಾಟುಗಳು ಹೊಂದಾಣಿಕೆಯ ನಮೂದುಗಳಾಗಿದ್ದು, ಅವುಗಳನ್ನು ಅಂತಿಮ ಲೆಕ್ಕ ಶೀರ್ಷಿಕೆಗೆ ಲೆಕ್ಕ ಮಾಡಿ ಚುಕ್ತಗೊಳಿಸಬೇಕಾಗುತ್ತದೆ. |

*1.2.2 ಲೆಕ್ಕಗಳ ಸಂಕಲನ*

**ಲೆಕ್ಕಗಳ ಸಂಕಲನದ ಹರಿವಿನ ನಕ್ಷೆ:**




## 1.3 ಹಣಕಾಸು ಲೆಕ್ಕಗಳು ಮತ್ತು ಧನವಿನಿಯೋಗ ಲೆಕ್ಕಗಳು

### *1.3.1 ಹಣಕಾಸು ಲೆಕ್ಕಗಳು*

ಹಣಕಾಸು ಲೆಕ್ಕಗಳು ಸರ್ಕಾರದ ಆಯಾ ವರ್ಷದ ಸ್ವೀಕೃತಿಗಳು ಮತ್ತು ವಿತರಣೆಗಳನ್ನಲ್ಲದೆ, ವಿತರಣೆಗಳ ಜೊತೆಗೆ, ಲೆಕ್ಕಗಳಲ್ಲಿ ದಾಖಲಿಸಲಾದ ರಾಜಸ್ವ ಮತ್ತು ಬಂಡವಾಳ ಲೆಕ್ಕಗಳು, ಸಾರ್ವಜನಿಕ ಋಣ ಮತ್ತು ಸಾರ್ವಜನಿಕ ಲೆಕ್ಕಗಳ ಶಿಲ್ಕುಗಳು ತೋರಿಸುವ ಆರ್ಥಿಕ ಪರಿಣಾಮಗಳನ್ನು ಸಹ ಬಿಂಬಿಸುತ್ತವೆ. ಹಣಕಾಸು ಲೆಕ್ಕಗಳು ಹೆಚ್ಚು ವ್ಯಾಪಕ ಮತ್ತು

ಉಪಯುಕ್ತವಾಗುವಂತೆ ಎರಡು ಸಂಪುಟಗಳನ್ನು ಹೊಂದಿವೆ. **ಸಂಪುಟ– I** ರಲ್ಲಿ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ದೃಢೀಕರಣ ಪತ್ರ, ಹಣಕಾಸು ಲೆಕ್ಕಗಳ ಮಾರ್ಗದರ್ಶಿ, ಒಟ್ಟಾರೆ ಸ್ವೀಕೃತಿಗಳು ಮತ್ತು ವಿತರಣೆಗಳ ಸಂಕ್ಷಿಪ್ತ ವಿವರಣಾ ಪಟ್ಟಿಗಳು, ಸರ್ಕಾರದ ಆಸ್ತಿ ಮತ್ತು ಜವಾಬ್ದಾರಿಗಳು, ಸಂಚಿತ ಬಂಡವಾಳ ವೆಚ್ಚ, ಸಾಲಗಳು ಮತ್ತು ಇತರ ಜವಾಬ್ದಾರಿಗಳು, ಸಾಲಗಳು ಮತ್ತು ಮುಂಗಡಗಳು, ಸರ್ಕಾರ ನೀಡಿರುವ ಖಾತರಿಗಳು ಮತ್ತು ಸಹಾಯನುದಾನಗಳು, ಸರ್ಕಾರದ ಹೂಡಿಕೆಗಳು, ಪುರಸ್ಕೃತ ಮತ್ತು ಪ್ರಭೃತ ಖರ್ಚಿನ ವಿತರಣೆ, ರಾಜಸ್ವ ಲೆಕ್ಕದಿಂದ ಹೊರತಾದ ಖರ್ಚುಗಳ ನಿಧಿಯ ಆಕರ, ಮತ್ತು ವಿನಿಯೋಗ, ಸರ್ಕಾರದ ಲೆಕ್ಕಗಳ ಶಿಲ್ಕುಗಳ ಸಾರಾಂಶ ಮತ್ತು ಬಾಬತ್ತುಗಳ ಆರ್ಥಿಕ ಸ್ಥಿತಿಗತಿಗಳ ಸಂಕ್ಷಿಪ್ತ ವಿವರಣಾಪಟ್ಟಿಗಳನ್ನು ಒಳಗೊಂಡಿದ್ದರೆ, **ಸಂಪುಟ– II** ರಲ್ಲಿ ವಿವರಣಾ ಪಟ್ಟಿಗಳು **(ಭಾಗ–I)** ಮತ್ತು ಅನುಬಂಧಗಳನ್ನು **(ಭಾಗ–II)** ಒಳಗೊಂಡಿದೆ.

2016–17ರ ಹಣಕಾಸು ಲೆಕ್ಕಗಳಲ್ಲಿ ತೋರಿಸಿರುವಂತೆ ಕರ್ನಾಟಕ ಸರ್ಕಾರದ ಸ್ವೀಕೃತಿಗಳು ಮತ್ತು ವಿತರಣೆಗಳನ್ನು ಕೆಳಗೆ ನೀಡಲಾಗಿದೆ.

**(₹ ಕೋಟಿಗಳಲ್ಲಿ)**

| | | | |
|---|---|---|---|
| **ಸ್ವೀಕೃತಿಗಳು (ಒಟ್ಟು : ₹162,006)** | **ರಾಜಸ್ವ (ಒಟ್ಟು: ₹133,214)** | ರಾಜ್ಯದ ಸ್ವಂತ ತೆರಿಗೆ ರಾಜಸ್ವ | 82,956 |
| | | ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯದ ಪಾಲು | 28,760 |
| | | ತೆರಿಗೆಯೇತರ ರಾಜಸ್ವ | 5,795 |
| | | ಸಹಾಯಾನುದಾನ ಮತ್ತು ವಂತಿಗೆಗಳು(1) | 15,703 |
| | **ಬಂಡವಾಳ (ಒಟ್ಟು:₹28,792)** | ಸಾಲ ಮತ್ತು ಮುಂಗಡಗಳ ವಸೂಲಾತಿ | 100 |
| | | ಇತರೆ ಸ್ವೀಕೃತಿಗಳು (ಇತರೆ ಬಂಡವಾಳ ಸ್ವೀಕೃತಿಗಳು) | 27 |
| | | ಸಾಲಗಳು ಮತ್ತು ಇತರ ಜವಾಬ್ದಾರಿಗಳು(1) | 28,665 |
| **ವಿತರಣೆಗಳು (ಒಟ್ಟು : ₹162,006)** | **ರಾಜಸ್ವ(2)** | | 131,921 |
| | **ಬಂಡವಾಳ** | | 28,151 |
| | **ಸಾಲಗಳು ಮತ್ತು ಮುಂಗಡಗಳು** | | 1,934 |

(1) ಇದು (ಅ) ಸಾರ್ವಜನಿಕ ಋಣ {₹23,736 ಕೋಟಿ}; (ಆ) ಸಾದಿಲ್ವಾರು ನಿಧಿ {ಇಲ್ಲ}; (ಇ) ಸಾರ್ವಜನಿಕ ಲೆಕ್ಕ {₹5,104 ಕೋಟಿ} ಮೊತ್ತದಲ್ಲಿ ಕಳೆದ (ಈ) ನಗದು ಶಿಲ್ಕು {(+)₹175 ಕೋಟಿ} ಒಳಗೊಂಡಿದೆ.

(2) ಬಂಡವಾಳ ಆಸ್ತಿಗಳ ಸೃಜನೆಗೆ ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಗೊಳಿಸಿದ ₹2,685 ಕೋಟಿಗಳ ಅನುದಾನವು ಇದರಲ್ಲಿ ಸೇರಿದೆ. (ಹಣಕಾಸು ಲೆಕ್ಕಗಳ ಸಂಪುಟ I ರ ವಿವರಣಾ ಪಟ್ಟಿ–10ನ್ನು ನೋಡಿ).

### *1.3.2. ಧನವಿನಿಯೋಗ ಲೆಕ್ಕಗಳು*

ಧನವಿನಿಯೋಗ ಲೆಕ್ಕಗಳು ಹಣಕಾಸು ಲೆಕ್ಕಗಳಿಗೆ ಪೂರಕವಾಗಿದ್ದು ರಾಜ್ಯ ವಿಧಾನ ಮಂಡಲವು ಅನುಮೋದಿಸಿದ ಅವಕಾಶಗಳಿಗೆ ಪ್ರತಿಯಾಗಿ ಅನುದಾನವಾರು ಒಟ್ಟು ವೆಚ್ಚವನ್ನು ದಾಖಲಿಸಿ ಅವಕಾಶ ಒದಗಿಸಿದ್ದ ಮೊತ್ತಗಳಿಗೂ ವಾಸ್ತವ ವೆಚ್ಚಗಳಿಗೂ ನಡುವಿನ ವ್ಯತ್ಯಾಸಕ್ಕೆ ವಿವರಣೆಗಳನ್ನು ನೀಡುತ್ತದೆ. ಒಟ್ಟು 28 ಪುರಸ್ಕೃತ ಅನುದಾನಗಳು ಮತ್ತು ಒಂದು ಪ್ರಭೃತ ವಿನಿಯೋಗವು ಇದೆ.

ರಾಜ್ಯ ಸಂಚಿತ ನಿಧಿಯ ಮೇಲಿನ ಪ್ರಭೃತ ಮತ್ತು ಇತರೆ ವೆಚ್ಚಗಳಿಗಾಗಿ ಕಲ್ಪಿಸಿರುವ ಅವಕಾಶಗಳಿಗಾಗಿ ವಿಧಾನ ಮಂಡಲವು 2016 ಮತ್ತು 2017ರ ಧನವಿನಿಯೋಗ ಅಧಿನಿಯಮವನ್ನು ಅನುಮೋದಿಸಿತು. 2016 ಮತ್ತು 2017ರ ಧನವಿನಿಯೋಗ ಅಧಿನಿಯಮವು ಪ್ರಸಕ್ತ ವರ್ಷದಲ್ಲಿ ರಾಜ್ಯ ವಿಧಾನ ಮಂಡಲವು ಪೂರಕ ಅನುದಾನ ₹13,955 ಕೋಟಿ ಸೇರಿದಂತೆ

ಅನುಮೋದಿಸಿದ ₹1,86,052 ಕೋಟಿಗಳ ಒಟ್ಟು ವೆಚ್ಚವನ್ನು ಪ್ರಕ್ಷೇಪಿಸಿತ್ತು. ಇದರೊಂದಿಗೆ ವಸೂಲಿಯ ಮೊತ್ತವಾಗಿ ₹10,403 ಕೋಟಿಗಳನ್ನು ವೆಚ್ಚದಲ್ಲಿ ಕಡಿಮೆಯೆಂದು ಪರಿಗಣಿಸಬೇಕಾಗಿ ಪ್ರಕ್ಷೇಪಿಸಲಾಗಿತ್ತು.

2016–17ರ ಧನವಿನಿಯೋಗ ಲೆಕ್ಕಗಳು ಒಟ್ಟಾರೆ ಆಯವ್ಯಯ ಅಂದಾಜು ₹186,052 ಕೋಟಿಗಳಿಗೆ ಪ್ರತಿಯಾಗಿ ₹173,045 ಕೋಟಿಗಳ ವೆಚ್ಚವನ್ನು ತೋರಿಸಿದ್ದು, ₹11,922 ಕೋಟಿಗಳ ನಿವ್ವಳ ಉಳಿತಾಯವಾಗಿದೆ. ಇದರಲ್ಲಿ 5 ಅನುದಾನಗಳ ಹೆಚ್ಚುವರಿ ವೆಚ್ಚ ₹1,085 ಕೋಟಿಗಳೂ ಸೇರಿವೆ. ವೆಚ್ಚದಲ್ಲಿ ಕಡಿತವೆಂದು ತೋರಿಸುವ ವಸೂಲಾತಿಯ ಮೊತ್ತವು ₹3,619 ಕೋಟಿಗಳಷ್ಟಿದ್ದು, ಆಯವ್ಯಯ ಅಂದಾಜಿನ (₹10,403 ಕೋಟಿ) ಮೊತ್ತಕ್ಕಿಂತಲೂ ₹6,784 ಕೋಟಿಗಳಷ್ಟು ಕಡಿಮೆಯಾಗಿದೆ. ಒಟ್ಟು ವೆಚ್ಚದ ಮೊತ್ತವು ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೂಲಕ ಸೆಳೆದ ₹42 ಕೋಟಿಗಳಿಗೆ ಸವಿವರ ಬಿಲ್ಲುಗಳ ಸಲ್ಲಿಕೆಯು ಬಾಕಿ ಉಳಿದಿದೆ.

2016–17ರಲ್ಲಿ ₹5,517 ಕೋಟಿಗಳ ಮೊತ್ತವು ಸಾರ್ವಜನಿಕ ಲೆಕ್ಕದಡಿ ನಿರ್ದಿಷ್ಟ ಉದ್ದೇಶಗಳಿಗಾಗಿ ನಿಯುಕ್ತ ಆಡಳಿತಾಧಿಕಾರಿಗಳು ನಿರ್ವಹಿಸುವ ವೈಯಕ್ತಿಕ ಠೇವಣಿ ಲೆಕ್ಕಗಳಿಗೆ ಸಂಚಿತ ನಿಧಿಯಿಂದ ವರ್ಗಾಯಿಸಲ್ಪಟ್ಟಿದೆ. ಸಾಧಾರಣವಾಗಿ, ಆಡಳಿತಾಧಿಕಾರಿಗಳು ಆರ್ಥಿಕ ವರ್ಷದ ಕೊನೆಯಲ್ಲಿ ವೈಯಕ್ತಿಕ ಠೇವಣಿ ಲೆಕ್ಕದಲ್ಲಿ ಬಳಕೆಯಾಗದೆ ಉಳಿದ ಮೊತ್ತವನ್ನು ಸಂಚಿತ ನಿಧಿಗೆ ವರ್ಗಾಯಿಸಬೇಕಾಗಿದೆ. ವರ್ಷದ ಕೊನೆಯಲ್ಲಿ ಒಟ್ಟಾರೆ ₹2,942 ಕೋಟಿಗಳ ಮೊತ್ತವು ಆಡಳಿತಾಧಿಕಾರಿಗಳ ವೈಯಕ್ತಿಕ ಠೇವಣಿ ಲೆಕ್ಕದಲ್ಲಿ ಬಳಕೆಯಾಗದೆ ಉಳಿದಿತ್ತು.

## 1.4 ನಿಧಿಗಳ ಆಕರಗಳು ಮತ್ತು ಅನ್ವಯಗಳು

### *1.4.1 ಅರ್ಥೋಪಾಯ ಮುಂಗಡಗಳು*

ಇವು ಕೇವಲ ತಾತ್ಕಾಲಿಕ ಸ್ವರೂಪದ ಮುಂಗಡಗಳು. ಭಾರತೀಯ ರಿಜರ್ವ್‌ಬ್ಯಾಂಕಿನಲ್ಲಿ ರಾಜ್ಯ ಸರ್ಕಾರದ ನಗದು ಶಿಲ್ಕು ಕನಿಷ್ಠ ಮೊತ್ತಕ್ಕಿಂತ ಕಡಿಮೆಯಾದಾಗ ಆ ಕೊರತೆಯನ್ನು ತುಂಬಲು ಈ ಮುಂಗಡವನ್ನು ಪಡೆಯಲಾಗುತ್ತದೆ. ಗರಿಷ್ಠ ಅರ್ಥೋಪಾಯ ಮುಂಗಡವನ್ನು ಪಡೆದ ನಂತರವೂ ನಗದು ಶಿಲ್ಕು ಕನಿಷ್ಠ ಮೊತ್ತಕ್ಕಿಂತಲೂ ಕಡಿಮೆಯಿದ್ದಲ್ಲಿ, ಆ ಕೊರತೆಯನ್ನು ಓವರ್ ಡ್ರಾಫ್ಟ್ ಸೌಲಭ್ಯದ ಮೂಲಕ ಭರಿಸಲಾಗುತ್ತದೆ. 2016–17ರಲ್ಲಿ ರಾಜ್ಯ ಸರ್ಕಾರವು ಭಾರತೀಯ ರಿಜರ್ವ್ ಬ್ಯಾಂಕಿನಿಂದ ಯಾವುದೇ ಅರ್ಥೋಪಾಯ ಮುಂಗಡ ಅಥವಾ ಓವರ್ ಡ್ರಾಫ್ಟ್ ಸೌಲಭ್ಯವನ್ನು ಪಡೆದಿರುವುದಿಲ್ಲ.

### *1.4.2 ನಿಧಿಗಳ ಹರಿವಿನ ವಿವರಣೆ*

2016–17ನೇ ವರ್ಷದಲ್ಲಿ ರಾಜ್ಯವು ₹1,293 ಕೋಟಿಗಳ ರಾಜಸ್ವ ಹೆಚ್ಚಳ ಮತ್ತು ₹28,665 ಕೋಟಿಗಳ ವಿತ್ತೀಯ ಕೊರತೆಯನ್ನು ಹೊಂದಿದ್ದು ಇದು ಕ್ರಮವಾಗಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ರಾ.ಒ.ಆಂ.ಉ)[3] ಶೇಕಡ 0.12 ಮತ್ತು ಶೇಕಡ 2.57 ರಷ್ಟಿತ್ತು. ವಿತ್ತೀಯ ಕೊರತೆಯು ಒಟ್ಟು ವೆಚ್ಚದ ಶೇಕಡ 17.65 ರಷ್ಟಿತ್ತು. ಈ ಕೊರತೆಯನ್ನು ಸಾರ್ವಜನಿಕ ಋಣ (₹23,736 ಕೋಟಿ), ಸಾರ್ವಜನಿಕ ಲೆಕ್ಕದಡಿಯ ನಿವ್ವಳ ಹೆಚ್ಚಳ (₹5,104 ಕೋಟಿ), ಸಾದಿಲ್ವಾರು ನಿಧಿಯ ಕೊಡುಗೆ (ಇಲ್ಲ) ಮತ್ತು ಆರಂಭಿಕ ಮತ್ತು ಅಂತಿಮ ಶಿಲ್ಕುಗಳ ನಿವ್ವಳ (₹175) ಕೋಟಿ) ಜಮೆಗಳಿಂದ ಭರಿಸಲಾಗಿತ್ತು. ಸುಮಾರು ಶೇಕಡ 71.56ರಷ್ಟು ರಾಜಸ್ವ ಸ್ವೀಕೃತಿಗಳನ್ನು (₹1,33,214 ಕೋಟಿ), ಸಂಬಳ[4] (₹9,790 ಕೋಟಿ),

ಸಬ್ಸಿಡಿಗಳು[4&5] (₹14,388 ಕೋಟಿ), ಸಹಾಯಾನುದಾನ[4] (₹9,115 ಕೋಟಿ), ಬಡ್ಡಿಪಾವತಿ (₹12,850 ಕೋಟಿ), {ಇದರಲ್ಲಿ ಆಯವ್ಯಯ ಹೊರತಾದ ಸಾಲದ ಮೇಲಿನ ಬಡ್ಡಿ (₹817 ಕೋಟಿ) '2049–ಬಡ್ಡಿಪಾವತಿ' ಪ್ರಧಾನ ಲೆಕ್ಕ ಶೀರ್ಷಿಕೆಯಲ್ಲದೆ ವಿವಿಧ ಪ್ರಧಾನ ಲೆಕ್ಕ ಶೀರ್ಷಿಕೆಗಳಡಿಯಲ್ಲಿಯೂ ಲೆಕ್ಕ ಮಾಡಲಾಗಿದೆ} ನಿವೃತ್ತಿ ವೇತನ ಪಾವತಿ (₹11,295 ಕೋಟಿ), ಸ್ಥಳೀಯ ಸಂಸ್ಥೆಗಳು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಪರಿಹಾರ ಮತ್ತು ನಿಯೋಜನೆ (₹35,384 ಕೋಟಿ), ಸಾಮಾಜಿಕ ಭದ್ರತಾ ವಿಶ್ರಾಂತಿ ವೇತನ (₹2,503 ಕೋಟಿ) ಮುಂತಾದ ಬದ್ಧ ವೆಚ್ಚಗಳಿಗೆ (₹95,326 ಕೋಟಿ) ಲೆಕ್ಕ ಮಾಡಲಾಗಿದೆ.

## ನಿಧಿಗಳ ಆಕರಗಳು ಮತ್ತು ಅನ್ವಯಗಳು

(₹ಕೋಟಿಗಳಲ್ಲಿ)

| | ವಿವರಗಳು | ಮೊತ್ತ |
|---|---|---|
| ಆಕರಗಳು | 1.4.2016 ರಲ್ಲಿದ್ದಂತೆ ಆರಂಭಿಕ ಶಿಲ್ಕು | (–)75 |
| | ರಾಜಸ್ವ ಸ್ವೀಕೃತಿಗಳು | 133,214 |
| | ಇತರೆ ಬಂಡವಾಳ ಸ್ವೀಕೃತಿಗಳು ಮತ್ತು ಸಾಲ ಮತ್ತು ಮುಂಗಡಗಳ ವಸೂಲಾತಿ | 127 |
| | ಸಾರ್ವಜನಿಕ ಋಣ | 31,156 |
| | ಸಣ್ಣ ಉಳಿತಾಯಗಳು, ಭವಿಷ್ಯ ನಿಧಿಗಳು ಮತ್ತು ಇತರೆ | 5,805 |
| | ಮೀಸಲು ನಿಧಿಗಳು ಮತ್ತು ಋಣ ಪರಿಹಾರ ನಿಧಿಗಳು | 7,545 |
| | ಸ್ವೀಕೃತ ಠೇವಣಿಗಳು | 47,614 |
| | ಮುಂಗಡಗಳ ಮರುಪಾವತಿ | ... |
| | ಅಮಾನತ್ತು ಲೆಕ್ಕ | 379,968 |
| | ಇರಸಾಲುಗಳು | 20 |
| | ಸಾದಿಲ್ವಾರು ನಿಧಿ | ... |
| | **ಒಟ್ಟು** | **605,374** |
| ಅನ್ವಯ | ರಾಜಸ್ವ ವೆಚ್ಚ | 131,921 |
| | ಬಂಡವಾಳ ವೆಚ್ಚ | 28,151 |
| | ಸಾಲ ನೀಡಿಕೆ | 1,934 |
| | ಸಾರ್ವಜನಿಕ ಋಣ ಮರುಪಾವತಿ | 7,420 |
| | ಸಣ್ಣ ಉಳಿತಾಯಗಳು, ಭವಿಷ್ಯನಿಧಿಗಳು ಮತ್ತು ಇತರೆ ಪಾವತಿಗಳು | 3,148 |
| | ಮೀಸಲು ಮತ್ತು ಋಣ ಪರಿಹಾರ ನಿಧಿಗಳು | 1,533 |
| | ಠೇವಣಿಗಳ ಮರುಪಾವತಿ | 44,572 |
| | ಮುಂಗಡಗಳ ಪಾವತಿ | ... |
| | ಆಮಾನತ್ತು ಲೆಕ್ಕ | 386,537 |
| | ಇರಸಾಲುಗಳು | 58 |
| | ಸಾದಿಲ್ವಾರು ನಿಧಿ | ... |
| | ಅಂತಿಮ ಶಿಲ್ಕು 31.3.2017 ರಲ್ಲಿದ್ದಂತೆ | 100 |
| | **ಒಟ್ಟು** | **605,374** |

(3) 2016–17ನೇ ವರ್ಷದ ರಾ.ಒ.ಆಂ.ಉ. : ₹1,117,334 ಕೋಟಿ (ಆಕರ: ಮಧ್ಯಂತರ ವಿತ್ತೀಯ ಯೋಜನೆ 2017–21).

(4) ಸಂಬಳ, ಸಬ್ಸಿಡಿಗಳು ಮತ್ತು ಸಹಾಯಾನುದಾನಗಳು ಎಲ್ಲಾ ವಿಭಾಗಗಳಿಂದ ಸಂಕಲಿತವಾಗಿದೆ ಮತ್ತು ಸಂಬಳ ವೆಚ್ಚವು ಸ್ಥಳೀಯ ಸಂಸ್ಥೆಗಳಿಗೆ ಸಂಬಳಕ್ಕಾಗಿ ನೀಡಿದ ಅನುದಾನಗಳನ್ನು ಒಳಗೊಂಡಿರುವುದಿಲ್ಲ.

(5) ಸಬ್ಸಿಡಿ '106 ಸಬ್ಸಿಡಿಗಳು' ಅಡಿಯಲ್ಲಿ ಸಂಕಲಿಸಿದ ವೆಚ್ಚವನ್ನು ಒಳಗೊಂಡಿದೆ.

### *1.4.3 ರಾಜಸ್ವದ ಆಕರಗಳು*

ಸರ್ಕಾರವು ಮಾಡುವ ಸಾರ್ವಜನಿಕ ವೆಚ್ಚಗಳು ಮುಖ್ಯವಾಗಿ ಸಂಚಿತ ನಿಧಿಯಡಿಯ ಸರ್ಕಾರದ ಸ್ವೀಕೃತಿಗಳು, ಸಾರ್ವಜನಿಕ ಋಣದ ಸ್ವೀಕೃತಿಗಳು, ಸಾಲಗಳು ಮತ್ತು ಮುಂಗಡಗಳ ವಸೂಲಾತಿ ಮತ್ತು ಸಾರ್ವಜನಿಕ ಲೆಕ್ಕದಡಿಯ ನಗದು ಏರಿಕೆಯನ್ನು ಕಳೆದ ನಂತರ ನಿವ್ವಳ ಏರಿಕೆಗಳಿಂದ ಬಂದ ಜಮೆಗಳಿಂದ ಆಗುತ್ತದೆ. ಸಂಚಿತ ನಿಧಿಯಡಿ ಪ್ರತಿ ರೂಪಾಯಿಯ ವಿಭಾಗವಾರು ಸ್ವೀಕೃತಿಯನ್ನು ಕೆಳಗಿನ ಪೈ ನಕ್ಷೆಯಲ್ಲಿ ನೀಡಲಾಗಿದೆ.




**ಸೂಚನೆ:** ಸ್ವೀಕೃತಿಯಡಿಯಲ್ಲಿ ಇತರೆ ಬಂಡವಾಳ ಜಮೆ (₹27 ಕೋಟಿ) ಮತ್ತು ಸಾಲ ಮತ್ತು ಮುಂಗಡಗಳ ವಸೂಲಾತಿ (₹100 ಕೋಟಿ) ಒಂದು ಪೈಸೆಗಿಂತ ಕಡಿಮೆಯಾದ್ದರಿಂದ ಮೇಲಿನ ಪೈ ಚಿತ್ರದಲ್ಲಿ ತೋರಿಸಿರುವದಿಲ್ಲ.

### *1.4.4 ವೆಚ್ಚದ ಉದ್ದೇಶ*

ಸರ್ಕಾರವು ರಾಜ್ಯ ವಿಧಾನ ಮಂಡಲದ ಪೂರ್ವಾನುಮತಿಯೊಂದಿಗೆ ವಿವಿಧ ಕಾರ್ಯಕ್ರಮಗಳಿಗೆ, ಯೋಜನೆಗಳಿಗೆ ಮತ್ತು ವಸ್ತುನಿಷ್ಠ ವೆಚ್ಚಗಳಿಗೆ ಸಂಚಿತ ನಿಧಿಯಿಂದ ವೆಚ್ಚ ಮಾಡಲಾಗುತ್ತದೆ. ಪ್ರತಿ ರೂಪಾಯಿಯ ಮುಖ್ಯವಿಭಾಗವಾರು ವೆಚ್ಚವನ್ನು ಕೆಳಗಿನ ಪೈ ನಕ್ಷೆಯಲ್ಲಿ ನೀಡಲಾಗಿದೆ.



## 1.5 ಲೆಕ್ಕಗಳ ಮುಖ್ಯಾಂಶಗಳು

| ಕ್ರ. ಸಂ. | ವಿವರಗಳು | ಆಯವ್ಯಯ ಅಂದಾಜು 2016–17 (₹ ಕೋಟಿ) | | ವಾಸ್ತವಿಕ (₹ ಕೋಟಿ) | | ವಾಸ್ತವಿಕ ಹಾಗೂ ಆಯವ್ಯಯ ಅಂದಾಜುಗಳ ಶೇಕಡಾವಾರು | ವಾಸ್ತವಿಕ ಹಾಗೂ ರಾ.ಓ.ಆಂ.ಊ.ದ ಶೇಕಡಾವಾರು |
|---|---|---|---|---|---|---|---|
| 01. | ತೆರಿಗೆ ರಾಜಸ್ವ | 110,844 | (@) | 111,716 | (&) | 100.78 | 10.00 |
| 02. | ತೆರಿಗೆಯೇತರ ರಾಜಸ್ವ | 6,220 | | 5,795 | | 93.17 | 0.52 |
| 03. | ಸಹಾಯಾನುದಾನಗಳು ಮತ್ತು ವಂತಿಗೆಗಳು | 13,694 | | 15,703 | | 114.67 | 1.41 |
| **04.** | **ರಾಜಸ್ವ ಜಮೆಗಳು (1+2+3)** | **130,758** | | **133,214** | | **101.88** | **11.92** |
| 05. | ಸಾಲಗಳು ಮತ್ತು ಮುಂಗಡಗಳ ವಸೂಲಾತಿ | 87 | | 100 | | 114.94 | 0.01 |
| 06. | ಇತರೆ ಜಮೆಗಳು ಇತರ ಬಂಡವಾಳ | 75 | | 27 | | 36.00 | 0.00 |
| 07. | ಋಣ ಮತ್ತು ಇತರೆ ಜವಾಬ್ದಾರಿಗಳು | 25,657 | (#) | 28,665 | ($) | 111.72 | 2.57 |
| **08.** | **ಬಂಡವಾಳ ಜಮೆಗಳು (5+6+7)** | **25,819** | | **28,792** | | **111.53** | **2.58** |
| **09.** | **ಒಟ್ಟಾರೆ ಜಮೆಗಳು (4+8)** | **156,577** | | **162,006** | | **103.46** | **14.50** |
| **10.** | **ಯೋಜನೇತರ ವೆಚ್ಚ (11+13)** | **84,883** | | **84,430** | | **99.47** | **7.56** |
| 11. | ರಾಜಸ್ವ ಲೆಕ್ಕ– ಯೋಜನೇತರ ವೆಚ್ಚ | 84,336 | | 83,959 | | 99.55 | 7.51 |
| 12. | 11ರಮೊತ್ತದಲ್ಲಿ ಬಡ್ಡಿ ಪಾವತಿ ಯೋಜನೇತರ | 12,672 | | 12,033 | (^) | 94.96 | 1.08 |
| 13. | ಬಂಡವಾಳ ಲೆಕ್ಕ–ಯೋಜನೇತರ ವೆಚ್ಚ | 547 | | 471 | | 86.11 | 0.04 |
| **14.** | **ಯೋಜನಾ ವೆಚ್ಚ (15+16)** | **71,694** | | **77,576** | | **108.20** | **6.94** |
| 15. | ರಾಜಸ್ವ ಲೆಕ್ಕ– ಯೋಜನಾ ವೆಚ್ಚ | 45,900 | | 47,962 | | 104.49 | 4.29 |
| 16. | ಬಂಡವಾಳ ವೆಚ್ಚ–ಯೋಜನಾ ವೆಚ್ಚ | 25,794 | | 29,614 | | 114.81 | 2.65 |
| **17.** | **ಒಟ್ಟಾರೆ ವೆಚ್ಚ {(10+14) = (18+19)}** | **156,577** | | **162,006** | | **103.46** | **14.50** |
| 18. | ರಾಜಸ್ವ ವೆಚ್ಚ (11+15) | 130,236 | | 131,921 | | 101.29 | 11.81 |
| 19. | ಬಂಡವಾಳ ವೆಚ್ಚ (13+16) | 26,341 | (a) | 30,085 | (b) | 114.21 | 2.69 |
| **20.** | **ರಾಜಸ್ವ ಹೆಚ್ಚಳ (4-18)** | **522** | | **1,293** | | **247.70** | **0.12** |
| **21.** | **ವಿತ್ತೀಯ ಕೊರತೆ {(17) - (4+5+6) = 7}** | **25,657** | | **28,665** | | **111.72** | **2.57** |

| | |
|---|---|
| (*) | 2016–17ನೇ ವರ್ಷದ ರಾ.ಒ.ಆಂ.ಉ : ₹1,117,334 ಕೋಟಿ (ಆಕರ : ಮಧ್ಯಂತರ ವಿತ್ತೀಯ ಯೋಜನೆ 2017–21). |
| @ | ₹26,979 ಕೋಟಿ ರಾಜ್ಯ ಪಾಲಿನ ಕೇಂದ್ರೀಯ ತೆರಿಗೆಗಳು ಮತ್ತು ಸುಂಕಗಳನ್ನೊಳಗೊಂಡಿದೆ. |
| (&) | ₹28,760 ಕೋಟಿ ರಾಜ್ಯದ ಪಾಲಿನ ಕೇಂದ್ರೀಯ ತೆರಿಗೆಗಳು ಮತ್ತು ಸುಂಕಗಳನ್ನೊಳಗೊಂಡಿದೆ. |
| (#) | ಇದು (i) ಸಾರ್ವಜನಿಕ ಋಣ (₹24,195 ಕೋಟಿ) (ii) ಸಾರ್ವಜನಿಕ ಲೆಕ್ಕ (₹1,285 ಕೋಟಿ) ಮೊತ್ತದಲ್ಲಿ ಕಳೆದ (iii) ನಿವ್ವಳ ನಗದು ಶಿಲ್ಕು {(–)₹177 ಕೋಟಿ} ಒಳಗೊಂಡಿರುತ್ತದೆ. |
| ($) | ಇದು (i) ಸಾರ್ವಜನಿಕ ಋಣ (₹23,736 ಕೋಟಿ) (ii) ಸಾದಿಲ್ವಾರು ನಿಧಿ (ಇಲ್ಲ) ಮತ್ತು (iii) ಸಾರ್ವಜನಿಕ ಲೆಕ್ಕ (₹5,104 ಕೋಟಿ) ಮೊತ್ತದಲ್ಲಿ ಕಳೆದ (iv) ನಿವ್ವಳ ನಗದು ಶಿಲ್ಕು {(+)₹175 ಕೋಟಿ} ಒಳಗೊಂಡಿರುತ್ತದೆ. |
| (a) | ಬಂಡವಾಳ ವೆಚ್ಚ (₹25,716 ಕೋಟಿ), ಸಾಲಗಳು ಮತ್ತು ಮುಂಗಡಗಳು (₹625 ಕೋಟಿ) ಇವುಗಳ ಅಂದಾಜನ್ನು ಒಳಗೊಂಡಿರುತ್ತದೆ. |
| (b) | ಬಂಡವಾಳ ವೆಚ್ಚ (₹28,151 ಕೋಟಿ) ಮತ್ತು ಸಾಲಗಳು ಮತ್ತು ಮುಂಗಡಗಳು (₹1,934 ಕೋಟಿ) ಇವುಗಳನ್ನು ಒಳಗೊಂಡಿರುತ್ತದೆ. |
| (^) | ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ (₹817 ಕೋಟಿ) ಪಾವತಿಯನ್ನು ಹೊರತುಪಡಿಸಿದೆ ಹಾಗೂ ಇದು ಸಾಮಾನ್ಯ ಸೇವೆಗಳು, ಸಾಮಾಜಿಕ ಸೇವೆಗಳು ಮತ್ತು ಆರ್ಥಿಕ ಸೇವೆಗಳಡಿ ಇರುವ ಇತರೆ ಕಾರ್ಯಿಕ ಪ್ರಧಾನ ಲೆಕ್ಕ ಶೀರ್ಷಿಕೆಗಳಲ್ಲಿ ಪಾವತಿಯಾಗಿದೆ. |

## 1.6 ಕೊರತೆ ಮತ್ತು ಹೆಚ್ಚಳಗಳ ವ್ಯಾಖ್ಯೆ

| | |
|---|---|
| **ಕೊರತೆ** | ಆದಾಯ ಮತ್ತು ವೆಚ್ಚಗಳ ನಡುವಿನ ಅಂತರಕ್ಕೆ ಸಂಬಂಧಿಸಿದೆ. ಕೊರತೆಯ ವಿಧ, ಕೊರತೆಯನ್ನು ಹೇಗೆ ನಿಭಾಯಿಸಲಾಗಿದೆ ಮತ್ತು ನಿಧಿಗಳ ಬಳಕೆಯು ಹಣಕಾಸು ನಿರ್ವಹಣೆಯಲ್ಲಿನ ವಿವೇಚನೆಯ ಮುಖ್ಯ ಸೂಚಕಗಳಾಗಿವೆ. |
| **ರಾಜಸ್ವ ಕೊರತೆ/ಹೆಚ್ಚಳ** | ರಾಜಸ್ವ ಸ್ವೀಕೃತಿಗಳು ಮತ್ತು ರಾಜಸ್ವ ವೆಚ್ಚದ ನಡುವಿನ ಅಂತರವನ್ನು ಸೂಚಿಸುತ್ತದೆ. ಅಸ್ತಿತ್ವದಲ್ಲಿರುವ ಸರ್ಕಾರದ ಸಂಸ್ಥೆಗಳ ನಿರ್ವಹಣೆಗೆ ರಾಜಸ್ವ ವೆಚ್ಚದ ಅಗತ್ಯವಿದೆ. ವಾಸ್ತವದಲ್ಲಿ ಇದನ್ನು ರಾಜಸ್ವ ಸ್ವೀಕೃತಿಗಳಲ್ಲಿಯೇ ಪೂರ್ಣವಾಗಿ ಭರಿಸಬೇಕು. |
| **ವಿತ್ತೀಯ ಕೊರತೆ/ಹೆಚ್ಚಳ** | ಒಟ್ಟು ಸ್ವೀಕೃತಿಗಳು (ಸ್ವೀಕೃತಿಗಳು/ಮರುಪಾವತಿಗಳನ್ನು ಹೊರತುಪಡಿಸಿ) ಮತ್ತು ಒಟ್ಟು ವೆಚ್ಚಗಳ ನಡುವಿನ ಅಂತರವನ್ನು ಸೂಚಿಸುತ್ತದೆ. ಹಾಗಾಗಿ, ಈ ಅಂತರವು ಸಾಲಗಳ ಮೂಲಕ ಭರಿಸಲ್ಪಟ್ಟ ವೆಚ್ಚದ ಪ್ರಮಾಣವನ್ನು ಸೂಚಿಸುತ್ತದೆ. ವಾಸ್ತವವಾಗಿ ಸಾಲಗಳ ಮೂಲಕ ಪಡೆದ ಮೊತ್ತವನ್ನು ಬಂಡವಾಳ ಯೋಜನೆಗಳಲ್ಲಿ ಹೂಡಬೇಕಾಗಿರುತ್ತದೆ. |

ಕೊರತೆ ಸೂಚಕಗಳು, ಆದಾಯದ ವೃದ್ಧಿ ಮತ್ತು ವೆಚ್ಚ ನಿರ್ವಹಣೆಗಳು ಸರ್ಕಾರದ ವಿತ್ತ ನಿರ್ವಹಣೆಯ ಮಾಪನಕ್ಕೆ ಪ್ರಮುಖ ಮಾನದಂಡಗಳಾಗಿವೆ.

ವಿತ್ತೀಯ ಹೊಣೆಗಾರಿಕೆಗೆ ಸಂಬಂಧಿಸಿದ ಕಾಯ್ದೆಗಳಾದ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮ, 2002, ಮತ್ತು ಕರ್ನಾಟಕ ಸರ್ಕಾರಿ ಖಾತರಿಗಳ ಮೇಲೆ ಗರಿಷ್ಠ ಪರಿಮಿತಿ ಅಧಿನಿಯಮ (ಕೆಸಿಜಿಜಿಎ), 1999, ಗಳನ್ನು ಅಂಗೀಕರಿಸಿದ ನಂತರದಲ್ಲಿ ರಾಜ್ಯ ಸರ್ಕಾರವು ವಿತ್ತೀಯ ಕ್ರೋಢೀಕರಣ ಮಾರ್ಗದಲ್ಲಿ ನಿರಂತರವಾಗಿ ಸಾಗಿದೆ.

ಸರ್ಕಾರದ ಆರ್ಥಿಕ ಪರಿಸ್ಥಿತಿ ಮತ್ತು ಹೊಣೆಗಾರಿಕೆಗಳ ನಿರ್ವಹಣೆಯಲ್ಲಿ ಹೆಚ್ಚು ಪಾರದರ್ಶಕತೆಯನ್ನು ತರುವ ಸಲುವಾಗಿ 2011ರಲ್ಲಿ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮಕ್ಕೆ ತಿದ್ದುಪಡಿ ತರಲಾಯಿತು. ಪ್ರಸ್ತುತ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಅಧಿನಿಯಮದ ಹೊಸದಾಗಿ ಜಾರಿಗೆ ತರಲಾದ 5(2)(ಸಿ)ನೇ ಪ್ರಕರಣವು, ಇತರ ವಿಷಯಗಳೊಂದಿಗೆ ವರ್ಷದಲ್ಲಿ ಪ್ರಮುಖ ಕಾರ್ಯನೀತಿ ತೀರ್ಮಾನಗಳನ್ನು ತೆಗೆದುಕೊಂಡ ಕಾರಣದಿಂದಾಗಿ ಭವಿಷ್ಯದ ವೆಚ್ಚದ ಬದ್ಧತೆಗಳು ಮತ್ತು ವ್ಯಕ್ತ ಮತ್ತು ಅವ್ಯಕ್ತ ಹೊಣೆಗಾರಿಕೆಗಳ ಬಗ್ಗೆ ಸ್ಪಷ್ಟವಾದ ಪ್ರಕಟಣೆಗಳನ್ನು ಮಾಡುವಂತೆ ರಾಜ್ಯ ಸರ್ಕಾರಕ್ಕೆ ಆಜ್ಞಾಪಿಸುತ್ತದೆ. ರಾಜ್ಯ ಸರ್ಕಾರವು ವಿಧಾನ ಮಂಡಲದಲ್ಲಿ ಕ್ರಮವಾಗಿ ಮಂಡಿಸುವ ಮಧ್ಯಮಾವಧಿ ವಿತ್ತೀಯ ಯೋಜನೆಗಳ ಮೂಲಕ ಈ ಮಾಹಿತಿಯನ್ನು ಒದಗಿಸುತ್ತಾ ಬಂದಿದೆ. ಒಟ್ಟು ಹೊಣೆಗಾರಿಕೆಯನ್ನು ಲೆಕ್ಕಾಚಾರ ಮಾಡುವಾಗ ಆಯವ್ಯಯೇತರ ಸಾಲವನ್ನು ರಾಜ್ಯದ ಸ್ವಂತ ಹೊಣೆಗಾರಿಕೆಯ ಭಾಗವಾಗಿ ವರದಿ ಮಾಡಬೇಕಾದ ಅನುಸರಣಾ ನೀತಿಗೆ ಬದ್ಧವಾಗಿರಲು ಫೆಬ್ರವರಿ 2014ರಲ್ಲಿ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ, 2002ಕ್ಕೆ ತಿದ್ದುಪಡಿ ತರಲಾಯಿತು.

ಅನುಸರಿಸಬೇಕಾದ ಪ್ರಮುಖ ವಿತ್ತೀಯ ಮತ್ತು ಋಣದ ಮಾನದಂಡಗಳು ಮತ್ತು ರಾಜ್ಯದ ಅನುಸರಣಾ ಮಾಹಿತಿಯ ವಿವರಗಳನ್ನು ಈ ಕೆಳಗಿನ ಕೋಷ್ಠಕದಲ್ಲಿ ತೋರಿಸಲಾಗಿದೆ.

| ಕ್ರಮ ಸಂಖ್ಯೆ | ವಿವರಗಳು | ಶಾಸನಬದ್ಧ ಗುರಿ | ರಾಜ್ಯದ ಸಾಧನೆ |
|---|---|---|---|
| 1 | **ರಾಜಸ್ವ ಕೊರತೆ** | 31.03.2006ರ ಹೊತ್ತಿಗೆ ರಾಜಸ್ವ ಕೊರತೆಯನ್ನು ಶೂನ್ಯಕ್ಕೆ ಇಳಿಸುವುದು. | ಆರ್ಥಿಕ ವರ್ಷ 2004-05ರಲ್ಲಿಯೇ ಗುರಿಯನ್ನು ಸಾಧಿಸಲಾಗಿದೆ. 2016-17ರಲ್ಲಿ ಸರ್ಕಾರವು ₹1,293.04 ಕೋಟಿ ರಾಜಸ್ವ ಹೆಚ್ಚಳದೊಂದಿಗೆ ಗುರಿಯನ್ನು ಕಾಯ್ದುಕೊಂಡಿದೆ |
| 2 | **ವಿತ್ತೀಯ ಕೊರತೆ** | 31.03.2006ರೊಳಗೆ ವಿತ್ತೀಯ ಕೊರತೆಯನ್ನು ಅಂದಾಜಿಸಿದ ಜಿಎಸಡಿಪಿಯ ಶೇಕಡ 3ಕ್ಕಿಂತ ಅಧಿಕಗೊಳ್ಳದಂತೆ ಇಳಿಸುವುದು. | ವಿತ್ತೀಯ ಕೊರತೆಯು ₹28,664.97 ಕೋಟಿಗಳಷ್ಟಿದ್ದು ರಾ.ಒ.ಆಂ.ಉ.[6] ದ ಶೇಕಡಾ 2.57ರಷ್ಟಿದೆ. |
| 3 | **ಬಾಕಿಯಿರುವ ಜವಾಬ್ದಾರಿಗಳು** | 31.03.2017ರ ವೇಳೆಗೆ ಒಟ್ಟು ಹೊಣೆಗಾರಿಕೆ ಹಾಗೂ ಜಿಎಸಡಿಪಿಯ ಅನುಪಾತವು ಶೇಕಡ 25.2ನ್ನು ಮೀರದಿರುವುದನ್ನು ಖಚಿತಪಡಿಸಿಕೊಳ್ಳುವುದು. | 31ನೇ ಮಾರ್ಚ್ 2017ಕ್ಕೆ ಬಾಕಿಯಿರುವ ಜವಾಬ್ದಾರಿ (₹221,318.91 ಕೋಟಿ)[7] ರಾ.ಒ.ಆಂ.ಉ. ದ ಶೇಕಡಾ 19.81 ರಷ್ಟಿರುತ್ತದೆ. |
| 4 | **ಖಾತರಿಗಳು** | ಬಾಕಿ ಉಳಿದ ಖಾತರಿಯು ಯಾವದೇ ವರ್ಷದ ಏಪ್ರಿಲ್ 1ರಂದು ಅದಕ್ಕೆ ಹಿಂದಿನ ಎರಡನೇ ವರ್ಷದ ರಾಜಸ್ವ ಸ್ವೀಕೃತಿಯ ಶೇ.80ನ್ನು ಮೀರಬಾರದು. | 2016-2017ರ ಪ್ರಾರಂಭದಲ್ಲಿ ಬಾಕಿ ಉಳಿದ ಖಾತರಿಗಳು ₹13,153.98 ಕೋಟಿಯಷ್ಟಿದ್ದು, ಇದು ಎರಡನೇ ಹಿಂದಿನ ವರ್ಷ 2016-17 ರ ಒ.ರಾ.ಜ. ದ (₹104,142.15 ಕೋಟಿ) ಶೇಕಡಾ 12.63ರಷ್ಟಿದೆ. |
| (6) | ಭಾರತ ಸರ್ಕಾರದ ವಿತ್ತ ಸಚಿವಾಲಯ ತಿಳಿಸಿರುವಂತೆ ರಾ.ಒ.ಆಂ.ಉ. ₹1,117,334 ಕೋಟಿ (ಆಕರ: ಕರ್ನಾಟಕ ಸರ್ಕಾರದ ಎಮ್.ಟಿ.ಎಫ್.ಪಿ 2017-21) | | |
| (7) | ಕ.ಹ.ಜ (ತಿದ್ದುಪಡಿ) ಅದಿನಿಯಮ 2014ರ ಪ್ರಕಾರ) ಕರ್ನಾಟಕ ಸರ್ಕಾರ ಒದಗಿಸಿರುವ ಆಯವ್ಯಯದ ಹೊರಗಿನ ಸಾಲಗಳ ಮೊತ್ತದ ಬಾಕಿಯಿರುವ ಜವಾಬ್ದಾರಿ (₹10,248.28 ಕೋಟಿಗಳು ಹಾಗೂ ಸಂಚಿತ ನಿಧಿಯ ಜವಾಬ್ದಾರಿಗಳೂ ಮತ್ತು ಸಾರ್ವಜನಿಕ ಲೆಕ್ಕಗಳ ಜವಾಬ್ದಾರಿ ₹211,070.63 ಕೋಟಿ ಸೇರಿ ಆಗಿರುತ್ತದೆ. | | |

### *1.6.1 ರಾಜಸ್ವ ಹೆಚ್ಚಳದ ಪ್ರವೃತ್ತಿ*

ರಾಜಸ್ವ ಹೆಚ್ಚಳವು ಸರ್ಕಾರದ ರಾಜಸ್ವ ವೆಚ್ಚಕ್ಕಿಂತ ರಾಜಸ್ವ ಸ್ವೀಕೃತಿಗಳ ನಿವ್ವಳ ಅಧಿಕ್ಯವನ್ನು ಸೂಚಿಸುತ್ತದೆ. 2012–2013 ರಿಂದ 2016–2017ರವರೆಗಿನ ರಾಜಸ್ವ ಹೆಚ್ಚಳದ ಪ್ರವೃತ್ತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಹಾಗೂ ನಕ್ಷೆಯಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ರಾಜಸ್ವ ಹೆಚ್ಚಳ | 1,883 | 353 | 528 | 1,788 | 1,293 |
| ರಾ. ಒ. ಆಂ ಉ. * | 691,700 | 817,886 | 921,788 | 1,027,068 | 1,117,334 |
| ರಾ.ಒ.ಆಂ.ಉ.ದ ಶತಾಂಶವಾಗಿ ರಾ.ಹೆಚ್ಚಳ | 0.27 | 0.04 | 0.06 | 0.17 | 0.12 |
| * ಆಕರ : ಮಧ್ಯಂತರ ವಿತ್ತೀಯ ಯೋಜನೆ 2017–21 | | | | | |




### *1.6.2 ವಿತ್ತೀಯ ಕೊರತೆಯ ಪ್ರವೃತ್ತಿ*

ವಿತ್ತೀಯ ಕೊರತೆಯನ್ನು ಒಟ್ಟು ವೆಚ್ಚ (ರಾಜಸ್ವ + ಬಂಡವಾಳ + ನಿವ್ವಳ ಸಾಲ ಮತ್ತು ಮುಂಗಡಗಳು) ದಲ್ಲಿ ರಾಜಸ್ವ ಸ್ವೀಕೃತಿಗಳು ಮತ್ತು ಇತರೆ ಬಂಡವಾಳ ಸ್ವೀಕೃತಿಗಳನ್ನು ಕಳೆದು ಲೆಕ್ಕ ಮಾಡಲಾಗುತ್ತದೆ. 2012–2013 ರಿಂದ 2016–2017 ರವರೆಗಿನ ವಿತ್ತೀಯ ಕೊರತೆಯ ಪ್ರವೃತ್ತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ಹಾಗೂ ನಕ್ಷೆಯಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ವಿತ್ತೀಯ ಕೊರತೆ | 14,507 | 17,092 | 19,576 | 19,169 | 28,665 |
| ರಾ. ಒ. ಆಂ ಉ.* | 691,700 | 817,886 | 921,788 | 1,027,068 | 1,117,334 |
| ರಾ.ಒ.ಆಂ.ಉ.ದ ಶತಾಂಶವಾಗಿ ವಿತ್ತೀಯ ಕೊರತೆ | 2.10 | 2.09 | 2.12 | 1.87 | 2.57 |
| * ಆಕರ : ಮಧ್ಯಂತರ ವಿತ್ತೀಯ ಯೋಜನೆ 2017–21. | | | | | |




### *1.6.3 ಸರ್ಕಾರದ ಲೆಕ್ಕಗಳು*

ಆಯಾ ವರ್ಷದ ಒಟ್ಟು ವೆಚ್ಚಕ್ಕೂ (ರಾಜಸ್ವ ಮತ್ತು ಬಂಡವಾಳ ವೆಚ್ಚಗಳೆರಡೂ ಸೇರಿ) ವರ್ಷದ ಒಟ್ಟು ಆದಾಯಕ್ಕೂ (ರಾಜಸ್ವ ಮತ್ತು ಋಣ ಹೊರತು ಪಡಿಸಿದ ಬಂಡವಾಳ ಆದಾಯಗಳು) ಇರುವ ನಿವ್ವಳ ಹೆಚ್ಚಳ / ಕೊರತೆಯ ವ್ಯತ್ಯಾಸವನ್ನು 'ಸರ್ಕಾರದ ಲೆಕ್ಕ' ಎಂದು ಕರೆಯಲಾಗುವ ಪ್ರತ್ಯೇಕ ಖಾತೆಗೆ ವರ್ಗಾಯಿಸಲಾಗುವುದು. ಜೊತೆಗೆ, ಹಿಂದಿನ ವರ್ಷದ ಲೆಕ್ಕಗಳ ಹೊಂದಾಣಿಕೆ ಮತ್ತು ಇತರೆ ಸರ್ಕಾರಿ ಲೆಕ್ಕಗಳ ನಿವ್ವಳ ಪರಿಣಾಮದ ಅಂಶಗಳನ್ನು 'ಸರ್ಕಾರದ ಲೆಕ್ಕ' ಖಾತೆಗೆ ವರ್ಗಾಯಿಸಲಾಗುವುದು.

ಹೀಗೆ 'ಸರ್ಕಾರದ ಲೆಕ್ಕ'ದ ಖಾತೆಯು ವರ್ಷಾನುವರ್ಷ ಸರ್ಕಾರದ ವ್ಯವಹಾರಗಳಿಂದುಂಟಾದ ಆರ್ಥಿಕ ಹೆಚ್ಚಳ / ಕೊರತೆಗಳ ಸಂಚಿತ ಪರಿಣಾಮವನ್ನು ನಿರೂಪಿಸುತ್ತದೆ. "ಸರ್ಕಾರ ಲೆಕ್ಕ"ಗಳ ಹಿಂದಿನ ಐದು ವರ್ಷಗಳ ಖಾತೆಯ ವಿವರಗಳು ಈ ಕೆಳಗಿನಂತಿವೆ:

(₹ ಕೋಟಿಗಳಲ್ಲಿ)

| ವರ್ಷ | ರಾಜಸ್ವ ಶೀರ್ಷಿಕೆ | | | ಬಂಡವಾಳ ಶೀರ್ಷಿಕೆ | | | ಇತರೆ ಶೀರ್ಷಿಕೆ (#) ಹೆಚ್ಚಳ (+) ಕೊರತೆ (–) | ಸದರಿ ಸಾಲಿನ ಕೊರತೆ (–) | ಸಂಚಿತ ಹೆಚ್ಚಳ (+) ಕೊರತೆ (–) ವರ್ಷಾಂತ್ಯಕ್ಕೆ |
|---|---|---|---|---|---|---|---|---|---|
| | ಜಮೆ | ಬಟವಾಡೆ | ಹೆಚ್ಚಳ (+) ಕೊರತೆ (–) | ಜಮೆ | ಬಟವಾಡೆ | ಹೆಚ್ಚಳ (+) ಕೊರತೆ (–) | | | |
| 2012-13 | 78,176 | 76,293 | (+) 1,883 | 33 | 15,479 | (-) 15,446 | … | (-) 13,563 | (-) 104,270 |
| 2013-14 | 89,543 | 89,190 | (+) 353 | 88 | 16,947 | (-) 16,859 | … | (-) 16,506 | (-) 120,776 |
| 2014-15 | 104,142 | 103,614 | (+) 528 | 10 | 19,622 | (-) 19,612 | ... | (-) 19,084 | (-) 139,860 |
| 2015-16 | 118,817 | 117,029 | (+) 1,788 | 352 | 20,713 | (-) 20,361 | ... | (-) 18,573 | (-) 158,433 |
| 2016-17 | 133,214 | 131,921 | (+) 1,293 | 27 | 28,151 | (-) 28,124 | ... | (-) 26,831 | (-) 185,264 |
| (#) | ಇತರೆ ಸರ್ಕಾರದ ಲೆಕ್ಕ. | | | | | | | | |

### *1.6.4 ಸಾಲದ ಮೊತ್ತದಲ್ಲಿ ಬಂಡವಾಳ ವೆಚ್ಚಕ್ಕೆ ಬಳಸಿದ ಪ್ರಮಾಣ*

ಸಾಲವಾಗಿ ಪಡೆದ ಮೊತ್ತವನ್ನು ಪೂರ್ಣವಾಗಿ ಬಂಡವಾಳ ಆಸ್ತಿ ನಿರ್ಮಾಣಕ್ಕೆ ಬಳಸಿ ರಾಜಸ್ವ ಸ್ವೀಕೃತಿಗಳನ್ನು ಬಡ್ಡಿಪಾವತಿಗೆ ಉಪಯೋಗಿಸುವುದು ಸೂಕ್ತ. ಆದರೆ, ರಾಜ್ಯ ಸರ್ಕಾರವು ಪ್ರಸಕ್ತ ಸಾಲಿನ ಸಾಲದ ಮೊತ್ತವನ್ನು (₹31,156 ಕೋಟಿ) ಭಾಗಶಃ ಬಂಡವಾಳ ವೆಚ್ಚಕ್ಕೆ (₹30,085 ಕೋಟಿ) ಸಾಲ ಮತ್ತು ಮುಂಗಡಗಳ ವಿತರಣೆಯೊಳಗೊಂಡಂತೆ ಖರ್ಚು ಮಾಡಲಾಗಿದೆ.

~~~~~~
~~~~~~

# ಅಧ್ಯಾಯ–II

## ಸ್ವೀಕೃತಿಗಳು

### 2.1 ಪೀಠಿಕೆ

ಸರ್ಕಾರದ ಸ್ವೀಕೃತಿಗಳನ್ನು ರಾಜಸ್ವ ಸ್ವೀಕೃತಿಗಳು ಮತ್ತು ಬಂಡವಾಳ ಸ್ವೀಕೃತಿಗಳು ಎಂದು ವರ್ಗೀಕರಿಸಲಾಗಿದೆ. 2016–17ನೇ ಸಾಲಿನ ಒಟ್ಟು ಸ್ವೀಕೃತಿಗಳು ₹133,214 ಕೋಟಿಗಳಷ್ಟಿದ್ದು, ಇದು ರಾಜ್ಯದ ಪಾಲಿನ ಕೇಂದ್ರೀಯ ತೆರಿಗೆಗಳು ಮತ್ತು ಸುಂಕಗಳು ₹28,760 ಕೋಟಿ ಒಳಗೊಂಡಂತೆ, ತೆರಿಗೆ ರಾಜಸ್ವ (₹111,716 ಕೋಟಿ,) ತೆರಿಗೆಯೇತರ ರಾಜಸ್ವ (₹5,795 ಕೋಟಿ) ಹಾಗು ಕೇಂದ್ರ ಸರ್ಕಾರದ ಸಹಾಯಾನುದಾನ ಮತ್ತು ವಂತಿಗೆಗಳು (₹15,703 ಕೋಟಿ) ಒಳಗೊಂಡಿದೆ. ಬಂಡವಾಳ ಸ್ವೀಕೃತಿಯ (₹28,792 ಕೋಟಿ), ಸಾಲ ಮತ್ತು ಮುಂಗಡಗಳ ವಸೂಲಾತಿ (₹100 ಕೋಟಿ) ಇತರೆ ಬಂಡವಾಳ ಸ್ವೀಕೃತಿಗಳು (₹27 ಕೋಟಿ) ಮತ್ತು 'ಸಾಲಗಳು ಮತ್ತು ಇತರೆ ಜವಾಬ್ದಾರಿಗಳು' (₹28,665 ಕೋಟಿ) ಒಳಗೊಂಡಿದೆ. ಸಾಲಗಳು ಮತ್ತು ಇತರೆ ಜವಾಬ್ದಾರಿ (₹28,665 ಕೋಟಿ)ಯು, (1) "ಸಾರ್ವಜನಿಕ ಋಣ" (₹23,736 ಕೋಟಿ) (2) "ಸಾದಿಲ್ವಾರು ನಿಧಿ" (ಇಲ್ಲ), (3) "ನಿವ್ವಳ ಸಾರ್ವಜನಿಕ ಲೆಕ್ಕ" (₹5,104 ಕೋಟಿ) ಇವುಗಳ ಮೊತ್ತದಲ್ಲಿ ಕಳೆದ (4) "ನಿವ್ವಳ ನಗದು ಶಿಲ್ಕು" ₹175 ಕೋಟಿಯನ್ನು ಒಳಗೊಂಡಿದೆ.

### 2.2 ರಾಜಸ್ವ ಸ್ವೀಕೃತಿಗಳು

ರಾಜ್ಯ ಸರ್ಕಾರದ ರಾಜಸ್ವ ಸ್ವೀಕೃತಿಗಳು ರಾಜ್ಯದ ಸ್ವಂತ ತೆರಿಗೆ ಮತ್ತು ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿನ ಪಾಲನ್ನೊಳಗೊಂಡಂತೆ 'ತೆರಿಗೆ ರಾಜಸ್ವ', 'ತೆರಿಗೆಯೇತರ ರಾಜಸ್ವ' ಮತ್ತು 'ಕೇಂದ್ರ ಸರ್ಕಾರದ ಸಹಾಯಾನುದಾನಗಳು ಮತ್ತು ವಂತಿಗೆಗಳು' ಎಂಬ ಮೂರು ಮುಖ್ಯ ಮೂಲಗಳಿಂದ ಒಳಗೊಂಡಿದೆ. ಒಟ್ಟು ರಾಜಸ್ವದ ಸ್ವೀಕೃತಿಗೆ ಶತಾಂಶ ವಿಭಾಗೀಯ ರಾಜಸ್ವ ಸೀಕೃತಿಯನ್ನು ಕೆಳಗಿನ ಪೈ ನಕ್ಷೆಯಲ್ಲಿ ತೋರಿಸಲಾಗಿದೆ.

| | |
|---|---|
| **ತೆರಿಗೆ ರಾಜಸ್ವ** | ಇದು ರಾಜ್ಯ ಸರ್ಕಾರವು ಸಂಗ್ರಹಿಸಿ ಉಳಿಸಿಕೊಂಡ ತೆರಿಗೆಗಳು ಮತ್ತು ಸುಂಕಗಳು ಮತ್ತು ಸಂವಿಧಾನದ ಅನುಚ್ಛೇದ 280 (3) ರ ಅನ್ವಯ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲನ್ನು ಒಳಗೊಂಡಿದೆ. |
| **ತೆರಿಗೆಯೇತರ ರಾಜಸ್ವ** | ಇದರಲ್ಲಿ ಬಡ್ಡಿ ಸ್ವೀಕೃತಿ, ಲಾಭಾಂಶಗಳು ಮತ್ತು ಲಾಭಗಳು ಮತ್ತು ಇತರ ಇಲಾಖಾ ಸ್ವೀಕೃತಿಗಳು ಸೇರಿವೆ. |
| **ಸಹಾಯಾನುದಾನಗಳು ಮತ್ತು ವಂತಿಗೆಗಳು** | ಇದು ರಾಜ್ಯ ಸರ್ಕಾರಕ್ಕೆ ಕೇಂದ್ರ ನೀಡಿದ ಸಹಾಯವಾಗಿದ್ದು ಇದರಲ್ಲಿ ಕೇಂದ್ರ ಸರ್ಕಾರದ ಮೂಲಕ ವಿದೇಶಿ ಸರ್ಕಾರಗಳಿಂದ ಪಡೆದ ಬಾಹ್ಯ ಅನುದಾನ ಸಹಾಯ ಮತ್ತು ಸಹಾಯ ಸಾಮಗ್ರಿಗಳು ಮತ್ತು ಸಾಧನಗಳು ಸೇರಿವೆ. |



### 2.2.1 ರಾಜಸ್ವ ಸ್ವೀಕೃತಿಗಳ ಅಂಶಗಳು

ಒಟ್ಟು ರಾಜಸ್ವ ಸ್ವೀಕೃತಿಗಳಿಗೆ 'ತೆರಿಗೆ ರಾಜಸ್ವ' ಮತ್ತು 'ತೆರಿಗೆಯೇತರ ರಾಜಸ್ವ'ಗಳ ಶತಾಂಶವನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

| ಭಾಗಗಳು | ವಾಸ್ತವಿಕ (₹ ಕೋಟಿಗಳಲ್ಲಿ) | ಒಟ್ಟು ರಾಜಸ್ವ ಜಮೆಗೆ ಶೇಕಡಾವಾರು |
|---|---|---|
| **ಅ. ತೆರಿಗೆ ರಾಜಸ್ವ (*)** | **111,716** | **84** |
| ವರಮಾನ ಮತ್ತು ವೆಚ್ಚದ ಮೇಲಿನ ತೆರಿಗೆಗಳು | 16,515 | 12 |
| ಆಸ್ತಿ ಮತ್ತು ಬಂಡವಾಳ ವ್ಯವಹಾರಗಳ ಮೇಲಿನ ತೆರಿಗೆಗಳು | 8,036 | 6 |
| ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ | 87,165 | 66 |
| **ಬ. ತೆರಿಗೆಯೇತರ ರಾಜಸ್ವ** | **5,795** | **4** |
| ಬಡ್ಡಿ ಜಮೆಗಳು, ಲಾಭ ಮತ್ತು ಲಾಭಾಂಶಗಳು | 1,282 | 1 |
| ಸಾಮಾನ್ಯ ಸೇವೆಗಳು | 729 | 1 |
| ಸಾಮಾಜಿಕ ಸೇವೆಗಳು | 486 | ... |
| ಆರ್ಥಿಕ ಸೇವೆಗಳು | 3,298 | 2 |
| **ಕ. ಸಹಾಯಾನುದಾನಗಳು ಮತ್ತು ವಂತಿಗೆಗಳು** | **15,703** | **12** |
| **ಒಟ್ಟು ರಾಜಸ್ವ ಜಮೆಗಳು** | **133,214** | **100** |

(*) ಕೇಂದ್ರ ಸರ್ಕಾರದಿಂದ ಹಂಚಲಾದ ತೆರಿಗೆ ಮತ್ತು ಸುಂಕಗಳಲ್ಲಿನ ರಾಜ್ಯದ ಪಾಲು ₹28,760 ಕೋಟಿ (ರಾಜಸ್ವ ಜಮೆಯ ಶೇ. 21.59) ಒಳಗೊಂಡಿದೆ.

ಒಟ್ಟು ತೆರಿಗೆ ಆದಾಯ ₹111,716 ಕೋಟಿ ಮತ್ತು ತೆರಿಗೆಯೇತರ ಆದಾಯ ₹5,795 ಕೋಟಿ ಕ್ರಮವಾಗಿ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ* ಶೇಕಡ 10.00 ಮತ್ತು ಶೇಕಡ 0.52 ರಷ್ಟಿವೆ.

### 2.2.2 ಆದಾಯದ ಪ್ರಮುಖ ಮೂಲಗಳು

'ರಾಜಸ್ವ ತೆರಿಗೆ'ಗೆ ಪ್ರಮುಖ ಮೂಲಗಳ ರಾ. ಒ.ಆಂ.ಉ. ಶೇಕಡಾವಾರನ್ನು ಈ ಕೆಳಗೆ ನೀಡಲಾಗಿದೆ.

| ಲೆಕ್ಕ ಶೀರ್ಷಿಕೆ | (₹ಕೋಟಿಗಳಲ್ಲಿ) | ಶೇಕಡಾವಾರು |
|---|---|---|
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆಗಳು | 46,105 | 4.13 |
| ರಾಜ್ಯ ಅಬಕಾರಿ | 16,484 | 1.48 |
| ಮುದ್ರಾಂಕ ಮತ್ತು ನೋಂದಣಿ ಶುಲ್ಕ | 7,806 | 0.70 |
| ನಿಗಮ ತೆರಿಗೆ | 9,211 | 0.82 |
| ವಾಹನ ಮೇಲಿನ ತೆರಿಗೆಗಳು | 5,594 | 0.50 |
| ನಿಗಮ ತೆರಿಗೆ ಹೊರತಾಗಿ ವರಮಾನದ ಮೇಲಿನ ತೆರಿಗೆಗಳು | 6,402 | 0.57 |
| ಸರಕು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 3,306 | 0.30 |
| ಸೀಮಾ ಸುಂಕ | 3,962 | 0.35 |
| ಕೇಂದ್ರ ಅಬಕಾರಿ ಸುಂಕ | 4,525 | 0.41 |
| ಸೇವಾ ತೆರಿಗೆ | 4,639 | 0.42 |
| ಸರಕು ಮತ್ತು ಸೇವೆಗಳ ಮೇಲಿನ ಇತರ ತೆರಿಗೆ ಮತ್ತು ಶುಲ್ಕ | 1,099 | 0.10 |
| ವಿದ್ಯುಚ್ಛಕ್ತಿಯ ಮೇಲಿನ ತೆರಿಗೆ ಮತ್ತು ಶುಲ್ಕ | 1,452 | 0.13 |

* 2016–17 ನೇ ವರ್ಷದ ರಾ.ಒ.ಆಂ.ಉ: ₹1,117,334 ಕೋಟಿ (ಆಕರ : ಮಧ್ಯಂತರ ವಿತ್ತೀಯ ಯೋಜನೆ 2017–21)

ಪ್ರಸಕ್ತ ಸಾಲಿನಲ್ಲಿ ನಿವ್ವಳ ತೆರಿಗೆ ಸ್ವೀಕೃತಿಗಳು ಆಯವ್ಯಯ ಅಂದಾಜುಗಳಿಗಿಂತಲೂ ₹873 ಕೋಟಿಗಳಷ್ಟು ಹೆಚ್ಚಾಗಿದೆ. ಈ ಕೆಳಕಂಡಂತೆ ಪ್ರಮುಖ ವಾಸ್ತವ ತೆರಿಗೆ ಸ್ವೀಕೃತಿಗಳು ಆಯವ್ಯಯದೊಂದಿಗೆ ವ್ಯತ್ಯಾಸವಾಗಿರುವುದನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ.

(₹ ಕೋಟಿಗಳಲ್ಲಿ)

| ಆಯವ್ಯಯ ಅಂದಾಜುಗಳಿಗಿಂತ ಕಡಿಮೆ ಇರುವ ವಾಸ್ತವಗಳು | | ಆಯವ್ಯಯ ಅಂದಾಜುಗಳಿಗಿಂತ ಹೆಚ್ಚಳವಿರುವ ವಾಸ್ತವಗಳು | |
|---|---|---|---|
| ಮುದ್ರಾಂಕ ಮತ್ತು ನೋಂದಣಿ ಶುಲ್ಕ | 1294 | ಕೇಂದ್ರ ಅಬಕಾರಿ ಸುಂಕ | 1,156 |
| ಮಾರಾಟ, ವ್ಯಾಪಾರ ಮುಂತಾದವುಗಳ ಮೇಲಿನ ತೆರಿಗೆಗಳು | 399 | ನಿಗಮ ತೆರಿಗೆ | 749 |
| ಸೀಮಾ ಸುಂಕ | 254 | ವಾಹನ ಮೇಲಿನ ತೆರಿಗೆಗಳು | 434 |
| ನಿಗಮ ತೆರಿಗೆಯ ಹೊರತು ವರಮಾನದ ಮೇಲಣ ತೆರಿಗೆಗಳು | 156 | ಸರಕು ಮತ್ತು ಪ್ರಯಾಣಿಕರ ಮೇಲಿನ ತೆರಿಗೆಗಳು | 342 |
| ಸರಕು ಮತ್ತು ಸೇವೆಗಳ ಮೇಲಿನ ಇತರ ತೆರಿಗೆ ಮತ್ತು ಶುಲ್ಕ | 151 | ವಿದ್ಯುಚ್ಛಕ್ತಿಯ ಮೇಲಿನ ತೆರಿಗೆ ಮತ್ತು ಶುಲ್ಕ | 256 |
| ವರಮಾನದ ಮತ್ತು ವೆಚ್ಚಗಳ ಮೇಲಿನ ಇತರೆ ತೆರಿಗೆಗಳು | 29 | ಸೇವಾ ತೆರಿಗೆ | 264 |
| ಭೂಕಂದಾಯ | 27 | ಸಂಪತ್ತು ತೆರಿಗೆ | 21 |
| ರಾಜ್ಯ ಅಬಕಾರಿ | 26 | | |
| ವ್ಯವಸಾಯವರಮಾನದ ಮೇಲಣ ತೆರಿಗೆ | 11 | | |

## 2.3 ರಾಜಸ್ವ ಸ್ವೀಕೃತಿಗಳ ಪ್ರವೃತ್ತಿ

ಕಳೆದ ಐದು ವರ್ಷಗಳ ರಾಜಸ್ವ ಸ್ವೀಕೃತಿಗಳ ವಿಭಾಗಗಳ ಪ್ರವೃತ್ತಿ ಮತ್ತು ರಾ.ಒ.ಆಂ.ಉ.ದ ಒಟ್ಟು ರಾಜಸ್ವ ಸ್ವೀಕೃತಿಗಳ ಶತಾಂಶವನ್ನು ನಕ್ಷೆಯ ಸಹಿತ ಈ ಕೆಳಗೆ ಕೋಷ್ಟಕದಲ್ಲಿ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವರ್ಷ | ತೆರಿಗೆ ರಾಜಸ್ವ | ತೆರಿಗೆಯೇತರ ರಾಜಸ್ವ | ಸಹಾಯಾನು ದಾನಗಳು ಮತ್ತು ವಂತಿಗೆಗಳು | ಒಟ್ಟು ರಾಜಸ್ವ ಸ್ವೀಕೃತಿ | ರಾ.ಒ.ಆಂ.ಉ* | ರಾ.ಒ.ಆಂ.ಉ. ದ ಮೇಲಿನ ಒಟ್ಟು ರಾಜಸ್ವ ಸ್ವೀಕೃತಿಗಳ ಶತಾಂಶ |
|---|---|---|---|---|---|---|
| 2012–13 | 66,401 | 3,966 | 7,809 | 78,176 | 691,700 | 11.30 |
| 2013–14 | 76,412 | 4,032 | 9,099 | 89,543 | 817,886 | 10.92 |
| 2014–15 | 84,835 | 4,688 | 14,619 | 104,142 | 921,788 | 11.30 |
| 2015–16 | 99,533 | 5,355 | 13,929 | 118,817 | 1,027,068 | 11.57 |
| 2016–17 | 111,716 | 5,795 | 15,703 | 133,214 | 1,117,334 | 11.92 |

* ಆಕರ : ಮಧ್ಯಂತರ ವಿತ್ತೀಯ ಯೋಜನೆ 2017–21).






### *2.3.1 ತೆರಿಗೆ ರಾಜಸ್ವದ ಅಂಶಗಳು*

ಕಳೆದ ಐದು ವರ್ಷಗಳ ತೆರಿಗೆ ರಾಜಸ್ವದ ಉಪ–ವಿಭಾಗವಾರು ಪ್ರವೃತ್ತಿಯನ್ನು ಈ ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ತೆರಿಗೆ ರಾಜಸ್ವ | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ವರಮಾನ ಮತ್ತು ವೆಚ್ಚದ ಮೇಲಿನ ತೆರಿಗೆಗಳು | 7,978 | 8,516 | 9,660 | 13,653 | 16,515 |
| 2ಆಸ್ತಿ ಮತ್ತು ಬಂಡವಾಳ ವ್ಯವಹಾರಗಳ ಮೇಲಿನ ತೆರಿಗೆಗಳು | 5,438 | 6,401 | 7,225 | 8,397 | 8,036 |
| ಸರಕು ಮತ್ತು ಸೇವೆಗಳ ಮೇಲಿನ ತೆರಿಗೆ | 52,985 | 61,495 | 67,950 | 77,483 | 87,165 |
| **ಒಟ್ಟು ರಾಜಸ್ವ ತೆರಿಗೆ** | **66,401** | **76,412** | **84,835** | **99,533** | **111,716** |



## 2.4 ರಾಜ್ಯದ ತೆರಿಗೆಯ ಸಂಗ್ರಹದ ನಿರ್ವಹಣೆ

(₹ ಕೋಟಿಗಳಲ್ಲಿ)

| ವರ್ಷ | ರಾಜಸ್ವ ತೆರಿಗೆ | ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯ ಪಾಲು | ರಾಜ್ಯದ ಸ್ವಂತ ರಾಜಸ್ವ ತೆರಿಗೆ | ರಾ.ಒ.ಆಂ.ಉ* | ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ರಾಜ್ಯ ಪಾಲು | ರಾಜ್ಯದ ಸ್ವಂತ ರಾಜಸ್ವದ ತೆರಿಗೆ |
|---|---|---|---|---|---|---|
| | (₹ ಕೋಟಿಗಳಲ್ಲಿ) | | | | ರಾ.ಒ.ಆಂ.ಉ. ಶತಾಂಶ | |
| 2012–13 | 66,401 | 12,647 | 53,754 | 691,700 | 1.83 | 7.77 |
| 2013–14 | 76,412 | 13,808 | 62,604 | 817,886 | 1.69 | 7.65 |
| 2014–15 | 84,835 | 14,654 | 70,181 | 921,788 | 1.59 | 7.61 |
| 2015–16 | 99,533 | 23,983 | 75,550 | 1,027,068 | 2.33 | 7.36 |
| 2016–17 | 111,716 | 28,760 | 82,956 | 1,117,334 | 2.57 | 7.42 |

* ಆಕರ : ಮಧ್ಯಂತರ ವಿತ್ತೀಯ ಯೋಜನೆ 2017–21.

## 2.5 ತೆರಿಗೆ ಸಂಗ್ರಹದ ದಕ್ಷತೆ

### *ಎ. ಆಸ್ತಿಗಳ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆಗಳು(*)*

ತೆರಿಗೆ ಸಂಗ್ರಹದ ಶೇಕಡಾವಾರು ಶುಲ್ಕಕ್ಕೆ ಅನುಗುಣವಾಗಿ ರಾಜಸ್ವಸಂಗ್ರಹದ ದಕ್ಷತೆಯನ್ನು ಈ ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ರಾಜಸ್ವ ಸಂಗ್ರಹ | 5,494 | 6,441 | 7,221 | 8,423 | 8,093 |
| ಸಂಗ್ರಹದ ಮೇಲಿನ ವೆಚ್ಚ (ಎ) | 312 | 362 | 360 | 420 | 440 |
| ತೆರಿಗೆ ಸಂಗ್ರಹದ ಶೇಕಡಾವಾರು ಶುಲ್ಕ | 5.68 | 5.62 | 4.99 | 4.99 | 5.44 |

(*)ಆಸ್ತಿಯ ಮೇಲಿನ ತೆರಿಗೆಯು ರಾಜ್ಯದ ತೆರಿಗೆಯ ಭಾಗವಲ್ಲವಾದ್ದರಿಂದ ಆಸ್ತಿಗಳ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆಗಳಲ್ಲಿ ಇವುಗಳನ್ನು ಹೊರತುಪಡಿಸಿದೆ'.

(ಎ) ಒಳಶೀರ್ಷಿಕೆ '001- ನಿರ್ದೇಶನ ಮತ್ತು ಆಡಳಿತ' ಹಾಗೂ '101–ಸಂಗ್ರಹಣಾ ಶುಲ್ಕ' ಇದರಡಿಯಲ್ಲಿ ವೆಚ್ಚವಾದ ಮೊತ್ತಗಳನ್ನೊಳಗೊಂಡಿದೆ.

### *ಬಿ. ವಸ್ತು ಮತ್ತು ಸೇವಾ ತೆರಿಗೆ (*)*

(₹ ಕೋಟಿಗಳಲ್ಲಿ)

| ವಿವರ | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ರಾಜಸ್ವ ಸಂಗ್ರಹ | 49,054 | 56,787 | 63,497 | 67,753 | 75,983 |
| ಸಂಗ್ರಹದ ಮೇಲಿನ ವೆಚ್ಚ (ಎ) | 454 | 1,457 | 1,697 | 488 | 411 |
| ತೆರಿಗೆ ಸಂಗ್ರಹದ ಶೇಕಡಾವಾರು ವೆಚ್ಚ | 0.93 | 2.57 | 2.67 | 0.72 | 0.54 |

(*) 'ಸೀಮಾ ಶುಲ್ಕ, ಕೇಂದ್ರ ಅಬಕಾರಿ ಶುಲ್ಕ, ಸೇವಾ ತೆರಿಗೆ – ಇವುಗಳನ್ನು ಹೊರತುಪಡಿಸಿದೆ'.

(A) ಒಳಶೀರ್ಷಿಕೆ '001- ನಿರ್ದೇಶನ ಮತ್ತು ಆಡಳಿತ' ಹಾಗೂ '101-ಸಂಗ್ರಹಣಾ ಶುಲ್ಕ' ಇದರಡಿಯಲ್ಲಿ ವೆಚ್ಚವಾದ ಮೊತ್ತಗಳನ್ನೊಳಗೊಂಡಿದೆ.

## 2.6 ಕೇಂದ್ರ ತೆರಿಗೆ ಮತ್ತು ಸುಂಕಗಳಲ್ಲಿ ರಾಜ್ಯ ಪಾಲಿನ ಪ್ರವೃತ್ತಿ

(₹ ಕೋಟಿಗಳಲ್ಲಿ)

| ಪ್ರಧಾನ ಶೀರ್ಷಿಕೆ ವಿವರ | 2012-13 | 2013-14 | 2014-15 | 2015-16 | 2016-17 |
|---|---|---|---|---|---|
| ನಿಗಮ ತೆರಿಗೆ | 4,543 | 4,644 | 5,117 | 7,548 | 9,211 |
| ನಿಗಮ ತೆರಿಗೆ ಹೊರತಾದ ವರಮಾನದ ಮೇಲಿನ ತೆರಿಗೆ | 2,720 | 3,058 | 3,654 | 5,252 | 6,402 |
| ಸಂಪತ್ತು ತೆರಿಗೆ | 8 | 13 | 14 | 2 | 21 |
| ಸೀಮಾ ಸುಂಕ | 2,102 | 2,253 | 2,370 | 3,830 | 3,962 |
| ಕೇಂದ್ರ ಅಬಕಾರಿ ಸುಂಕ | 1,428 | 1,591 | 1,338 | 3,182 | 4,525 |
| ಸೇವಾ ತೆರಿಗೆ | 1,847 | 2,250 | 2,161 | 4,153 | 4,639 |
| ಸರಕುಗಳ ಮತ್ತು ಸೇವೆಗಳ ಮೇಲಿನ ಸುಂಕ ಮತ್ತು ಇತರ ತೆರಿಗೆಗಳು | * | * | * | 16 | * |
| **ರಾಜ್ಯ ಪಾಲಿನ ಕೇಂದ್ರ ತೆರಿಗೆ ಮತ್ತು ಸುಂಕಗಳು** | **12,647** | **13,808** | **14,654** | **23,983** | **28,760** |
| **ಒಟ್ಟು ರಾಜಸ್ವ ತೆರಿಗೆ** | **66,401** | **76,412** | **84,835** | **99,533** | **111,716** |
| **ಒಟ್ಟು ರಾಜಸ್ವ ತೆರಿಗೆಗೆ ಕೇಂದ್ರ ತೆರಿಗೆ ಮತ್ತು ಸುಂಕಗಳ ಶತಾಂಶ** | **19.05** | **18.07** | **17.27** | **24.10** | **25.74** |

* ₹ ಒಂದು ಕೋಟಿಗಿಂತಲೂ ಕಡಿಮೆ ಮೊತ್ತಗಳನ್ನು ಮತ್ತು ಶೀರ್ಷಿಕೆಯಡಿ ಸ್ವೀಕೃತಿಯಾದ ಮೊತ್ತಕ್ಕಿಂತ ಸಂಗ್ರಹದ ವೆಚ್ಚ ಅಧಿಕವಾಗಿರುವುದರಿಂದ ಋಣಾತ್ಮಕ ಅಂಕಿಯಾಗಿ ಸೂಚಿತವಾಗಿರುವ ಮೊತ್ತಗಳನ್ನು (ಭಾರತ ಸರ್ಕಾರದ ವಿತ್ತ ಸಚಿವಾಲಯದ ಮಂಜೂರಾತಿ ಆದೇಶದಲ್ಲಿ ಸೂಚಿಸಿರುವಂತೆ) ತೋರಿಸುತ್ತದೆ.

## 2.7 ಸಹಾಯಾನುದಾನ ಮತ್ತು ವಂತಿಗೆಗಳು

ಸಹಾಯಾನುದಾನ ಮತ್ತು ವಂತಿಗೆಗಳು ಕೇಂದ್ರ ಸರ್ಕಾರದಿಂದ ಬಂದ ಸಹಾಯವನ್ನು ಸೂಚಿಸುತ್ತದೆ ಮತ್ತು ಇದು ಯೋಜನಾ ಆಯೋಗ ಅನುಮೋದಿಸಿದ ರಾಜ್ಯ ಯೋಜನಾ ಕಾರ್ಯಕ್ರಮಗಳು, ಕೇಂದ್ರ ಯೋಜನೆಗಳು, ಕೇಂದ್ರ ಪುರಸ್ಕೃತ ಯೋಜನೆಗಳನ್ನು ಮತ್ತು ಹಣಕಾಸು ಆಯೋಗ ಶಿಫಾರಸ್ಸು ಮಾಡಿದ ರಾಜ್ಯ ಯೋಜನೇತರ ಕಾರ್ಯಕ್ರಮಗಳನ್ನು ಒಳಗೊಂಡಿದೆ. ಕಳೆದ ಐದು ವರ್ಷಗಳಲ್ಲಿ ಸಹಾಯಾನುದಾನ ಮತ್ತು ವಂತಿಗೆಯಡಿಯಲ್ಲಿನ ಒಟ್ಟು ಸ್ವೀಕೃತಿಗಳ ವಿವರಗಳನ್ನು ಕೆಳಗೆ ನೀಡಲಾಗಿದೆ.

(₹ ಕೋಟಿಗಳಲ್ಲಿ)

| ಸಹಾಯಾನುದಾನ ಮತ್ತು ವಂತಿಗೆಗಳ ಭಾಗಗಳು | 2012-13 | 2013-14 | 2014-15 | 2015-16 | 2016-17 |
|---|---|---|---|---|---|
| ಯೋಜನೇತರ ಅನುದಾನಗಳು | 2,455 | 3,140 | 3,635 | 5,548 | 7,045 |
| ರಾಜ್ಯ ಯೋಜನೆಗಳಿಗೆ ಅನುದಾನಗಳು | 2,909 | 3,341 | 9,097 | 8,105 | 8,102 |
| ಕೇಂದ್ರ ಯೋಜನೆಗಳಿಗೆ ಅನುದಾನಗಳು | 124 | 192 | 158 | 139 | 116 |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು | 2,321 | 2,426 | 1,729 | 137 | 440 |
| **ಒಟ್ಟು** | **7,809** | **9,099** | **14,619** | **13,929** | **15,703** |




ಒಟ್ಟು ಸಹಾಯಾನುದಾನ ಮತ್ತು ವಂತಿಗೆಗಳಲ್ಲಿ ಯೋಜನೇತರ ಅನುದಾನದ ಪಾಲು 2015–16 ರಲ್ಲಿದ್ದ ಶೇಕಡ 39.83 ರಿಂದ 2016–17ರಲ್ಲಿ ಶೇಕಡ 44.86ಕ್ಕೆ ಏರಿದ್ದರೆ ಕೇಂದ್ರ ಸರ್ಕಾರವು ಯೋಜನಾ ಕಾರ್ಯಕ್ರಮದ ಪುನರ್ರಚನೆ ಮತ್ತು ರಾಜ್ಯ ಆಯವ್ಯಯದ ಮೂಲಕ ಹಣ ಬಿಡುಗಡೆ ಮಾಡಿದ ಕಾರಣದಿಂದ ರಾಜ್ಯ ಯೋಜನಾ ಕಾರ್ಯಕ್ರಮಗಳ ಅನುದಾನದ ಪಾಲು 2015–16ರಲ್ಲಿದ್ದ ಶೇಕಡ 58.19ರಿಂದ, 2016–17ರಲ್ಲಿ 51.60ಕ್ಕೆ ಇಳಿದಿದೆ. ಯೋಜನಾ ಕಾರ್ಯಕ್ರಮಗಳಿಗೆ ಕೇಂದ್ರದ ಪಾಲು ಆಯವ್ಯಯದ ಅಂದಾಜಿನ ₹766 ಕೋಟಿಗಳಿಗೆ ಪ್ರತಿಯಾಗಿ, ವಾಸ್ತವವಾಗಿ ₹556 ಕೋಟಿಗಳ ಅನುದಾನವನ್ನು ಪಡೆಯಲಾಗಿದೆ ಹಾಗೂ ಇದು ಆಯವ್ಯಯ ಅಂದಾಜಿನ ಶೇಕಡ 72.58ರಷ್ಟು ಇತ್ತು.

## 2.8 ಸಾರ್ವಜನಿಕ ಋಣ

ಕಳೆದ ಐದು ವರ್ಷಗಳಲ್ಲಿ ಸಾರ್ವಜನಿಕ ಋಣದಡಿ ಸ್ವೀಕೃತಿಗಳ ಪ್ರವೃತ್ತಿಯನ್ನು ಕೆಳಗೆ ಸೂಚಿಸಲಾಗಿದೆ.

(₹ ಕೋಟಿಗಳಲ್ಲಿ)

| ವಿವರ | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ರಾಜ್ಯಸರ್ಕಾರದ ಆಂತರಿಕ ಋಣ | 12,116 | 16,132 | 20,510 | 19,801 | 29,238 |
| ಕೇಂದ್ರ ಸರ್ಕಾರದಿಂದ ಪಡೆದ ಸಾಲ ಮತ್ತು ಮುಂಗಡಗಳು | 1,349 | 1,155 | 1,365 | 1,271 | 1,918 |
| **ಒಟ್ಟು ಸಾರ್ವಜನಿಕ ಋಣ** | **13,465** | **17,287** | **21,875** | **21,072** | **31,156** |

ಪ್ರಸಕ್ತ 2016–17 ಸಾಲಿನಲ್ಲಿ ಸರ್ಕಾರವು 2026–27ರಲ್ಲಿ ವಿಮೋಚನೆಗೊಳ್ಳುವ ₹28,007 ಕೋಟಿಗಳಷ್ಟು ಮೊತ್ತದ 12 ಮಾರುಕಟ್ಟೆ ಸಾಲಗಳನ್ನು ಪಡೆದಿದೆ. ಪ್ರಸಕ್ತ ಸಾಲಿನಲ್ಲಿ ಸಾರ್ವಜನಿಕ ಋಣದ ಒಟ್ಟು ಸ್ವೀಕೃತಿ ₹31,156 ಕೋಟಿಯಲ್ಲಿ ರಾಜ್ಯ ಸರ್ಕಾರದ ಆಂತರಿಕ ಋಣ (₹29,238 ಕೋಟಿ) ಮತ್ತು ಈ ಅವಧಿಯಲ್ಲಿ ಪಡೆದ ಕೇಂದ್ರ ಸಾಲದ (₹1,918 ಕೋಟಿ) ಭಾಗಕ್ಕೆ ಪ್ರತಿಯಾಗಿ, ₹7,420 ಕೋಟಿ ಮೊತ್ತದ ಸಾರ್ವಜನಿಕ ಋಣದ ಮರುಪಾವತಿಯನ್ನು ಹೊರತುಪಡಿಸಿ ಬಂಡವಾಳ ವೆಚ್ಚವು ₹30,085 ಕೋಟಿಯಷ್ಟಿತ್ತು.

~~~~~~
~~~~~~

# ಅಧ್ಯಾಯ–III

## ವೆಚ್ಚಗಳು

### 3.1 ಪೀಠಿಕೆ

ವೆಚ್ಚಗಳನ್ನು ರಾಜಸ್ವ ವೆಚ್ಚ ಮತ್ತು ಬಂಡವಾಳ ವೆಚ್ಚ ಎಂದು ವರ್ಗೀಕರಿಸಲಾಗಿದೆ. ರಾಜಸ್ವ ವೆಚ್ಚವನ್ನು ರಾಜ್ಯ ಸರ್ಕಾರದ ಇಲಾಖೆಗಳ ದಿನನಿತ್ಯದ ಖರ್ಚಿನ ನಿರ್ವಹಣೆಗೆ ಬಳಸಲಾಗುತ್ತದೆ. ಬಂಡವಾಳ ವೆಚ್ಚವನ್ನು ಶಾಶ್ವತ ಆಸ್ತಿ ನಿರ್ಮಾಣ ಅಥವಾ ಅಂತಹ ಆಸ್ತಿಗಳ ಬಳಕೆಯನ್ನು ಹೆಚ್ಚಿಸಲು ಅಥವಾ ಶಾಶ್ವತ ಜವಾಬ್ದಾರಿಗಳನ್ನು ಕಡಿಮೆಯಾಗಿಸಲು ಬಳಸಲಾಗುತ್ತದೆ. ವೆಚ್ಚವನ್ನು ಯೋಜನೆ ಮತ್ತು ಯೋಜನೇತರ ಎಂದೂ ವರ್ಗೀಕರಿಸಲಾಗಿದೆ.

| | |
|---|---|
| **ಸಾಮಾನ್ಯ ಸೇವೆಗಳು** | ನ್ಯಾಯಾಂಗ, ಪೋಲೀಸ್, ಬಂದೀಖಾನೆ, ಲೋಕೋಪಯೋಗಿ, ನಿವೃತ್ತಿ ವೇತನ ಮುಂತಾದವುಗಳನ್ನು ಒಳಗೊಂಡಿದೆ. |
| **ಸಾಮಾಜಿಕ ಸೇವೆಗಳು** | ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ನೀರು ಸರಬರಾಜು ಮತ್ತು ನೈರ್ಮಲ್ಯ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ, ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಮುಂತಾದವುಗಳನ್ನು ಒಳಗೊಂಡಿದೆ. |
| **ಆರ್ಥಿಕ ಸೇವೆಗಳು,** | ಕೃಷಿ, ಗ್ರಾಮೀಣ ಅಭಿವೃದ್ಧಿ, ನೀರಾವರಿ, ಸಹಕಾರ, ಇಂಧನ, ಕೈಗಾರಿಕೆಗಳು, ಸಾರಿಗೆ ಮುಂತಾದವುಗಳನ್ನು ಒಳಗೊಂಡಿದೆ. |

### 3.2 ರಾಜಸ್ವ ವೆಚ್ಚ

2016–17ನೇ ಸಾಲಿನ ₹131,921 ಕೋಟಿಗಳ ರಾಜಸ್ವ ವೆಚ್ಚವು ಆಯವ್ಯಯ ಅಂದಾಜಿಗಿಂತಲೂ (₹130,236 ಕೋಟಿ) ₹1,685 ಕೋಟಿಗಳಷ್ಟು ಜಾಸ್ತಿಯಾಗಿದೆ. ಕಳೆದ ಐದು ವರ್ಷಗಳಲ್ಲಿ ಆಯವ್ಯಯ ಅಂದಾಜಿಗೆ ಪ್ರತಿಯಾಗಿ ರಾಜಸ್ವ ವೆಚ್ಚದ ಪ್ರವೃತ್ತಿಯನ್ನು ಕೆಳಗೆ ನೀಡಲಾಗಿದೆ.

**(₹ ಕೋಟಿಗಳಲ್ಲಿ)**

| ವಿವರ | 2012–13 | 2013–14 | 2014–15 | 2015–16 | 2016–17 |
|---|---|---|---|---|---|
| ಆಯವ್ಯಯ ಅಂದಾಜುಗಳು | 80,530 | 97,391 | 110,757 | 115,449 | 130,236 |
| ವಾಸ್ತವ ವೆಚ್ಚ | 76,293 | 89,190 | 103,614 | 117,029 | 131,921 |
| ಅಂತರ | 4,237 | 8,201 | 7,143 | (–) 1,580 | (–)1,685 |
| ಆಯವ್ಯಯದ ಅಂತರಕ್ಕೆ ಶೇಕಡಾವಾರು | 5 | 8 | 6 | 1 | 1 |

### 3.2.1 ರಾಜಸ್ವ ವೆಚ್ಚದ ವಿಭಾಗವಾರು ಹಂಚಿಕೆ

ವಿಭಾಗ ಮತ್ತು ಉಪವಿಭಾಗವಾರು ರಾಜಸ್ವ ವೆಚ್ಚದ ಹಂಚಿಕೆಯನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ

(₹ ಕೋಟಿಗಳಲ್ಲಿ)

| ರಾಜಸ್ವ ವೆಚ್ಚದ ಅಂಶಗಳು | | ಮೊತ್ತ | ಶೇಕಡಾವಾರು |
|---|---|---|---|
| **A.** | **ಸಾಮಾನ್ಯ ಸೇವೆಗಳು** (*) | **31,265** | **23.71** |
| a. | ರಾಜ್ಯದ ಅಂಗಗಳು | 1,021 | 0.77 |
| b. | ವಿತ್ತೀಯ ಸೇವೆಗಳು { (i) ರಿಂದ (iv) ರವರೆಗಿನ ಮೊತ್ತ} | 1,001 | 0.77 |
| (i) | ವರಮಾನ ಮತ್ತು ಖರ್ಚುಗಳ ಮೇಲಿನ ತೆರಿಗೆಗಳ ಸಂಗ್ರಹ | 6 | 0.01 |
| (ii) | ಆಸ್ತಿ ಮತ್ತು ಬಂಡವಾಳ ವಹಿವಾಟಿನ ಮೇಲಿನ ತೆರಿಗೆ ಸಂಗ್ರಹ | 456 | 0.35 |
| (iii) | ಸರಕುಗಳ ಮತ್ತು ಸೇವೆಗಳ ಮೇಲಿನ ತೆರಿಗೆ ಸಂಗ್ರಹ | 531 | 0.40 |
| (iv) | ಇತರ ವಿತ್ತೀಯ ಸೇವೆಗಳು | 8 | 0.01 |
| c. | ಬಡ್ಡಿ ಪಾವತಿ ಮತ್ತು ಋಣ ಸೇವೆ (&) | 12,033 | 9.12 |
| d. | ಆಡಳಿತ ಸೇವೆಗಳು | 5,816 | 4.41 |
| e. | ನಿವೃತ್ತಿ ವೇತನ ಮತ್ತು ಇತರ ಸಾಮಾನ್ಯ ಸೇವೆಗಳು | 11,394 | 8.64 |
| **B.** | **ಸಾಮಾಜಿಕ ಸೇವೆಗಳು** | **54,549** | **41.35** |
| **C.** | **ಆರ್ಥಿಕ ಸೇವೆಗಳು** | **40,421** | **30.64** |
| **D.** | **ಸಹಾಯಾನುದಾನ ಮತ್ತು ವಂತಿಗೆಗಳು** | **5,686** | **4.31** |
| | **ಒಟ್ಟು ವೆಚ್ಚ (ರಾಜಸ್ವ ಲೆಕ್ಕ)** | **131,921** | **100.00** |
| (*) | ಒಟ್ಟು ರಾಜಸ್ವ ವೆಚ್ಚಕ್ಕೆ ಸಂಬಂಧಿಸಿದ ವಿಭಾಗ ಮತ್ತು ಉಪವಿಭಾಗವಾರು ಶತಾಂಶ. | | |
| (&) | 'ಸಾಮಾನ್ಯ ಸೇವೆ', 'ಸಾಮಾಜಿಕ ಸೇವೆ' ಮತ್ತು 'ಆರ್ಥಿಕ ಸೇವೆ' ಉಪವಿಭಾಗಗಳಡಿಯಲ್ಲಿ ಸೇರಿರುವ ಪ್ರಧಾನ ಶೀರ್ಷಿಕೆಯಡಿಯಲ್ಲಿ ಲೆಕ್ಕ ಮಾಡಿರುವ ಆಯವ್ಯಯದ ಹೊರಗಿನ ಸಾಲಗಳ ಮೇಲಿನ ಬಡ್ಡಿ (₹817 ಕೋಟಿಗಳು) ಪಾವತಿಯನ್ನು ಹೊರತುಪಡಿಸಿದೆ. | | |

### 3.2.2 ವಿಭಾಗವಾರು ರಾಜಸ್ವ ವೆಚ್ಚದ ಸಂಯೋಜನೆಯ ಪ್ರವೃತ್ತಿ

(₹ ಕೋಟಿಗಳಲ್ಲಿ)

| ವರ್ಷ | ಸಾಮಾನ್ಯ ಸೇವೆಗಳು | ಸಾಮಾಜಿಕ ಸೇವೆಗಳು | ಆರ್ಥಿಕ ಸೇವೆಗಳು | ಸಹಾಯಾನು-ದಾನದ ಮತ್ತು ವಂತಿಗೆಗಳು | ಒಟ್ಟು ರಾಜಸ್ವ ವೆಚ್ಚಗಳು | ರಾ.ಒ.ಆಂ. ಉ*. | ರಾ.ಒ.ಆಂ.ಉ*. ಕ್ಕೆ ಒಟ್ಟು ರಾಜಸ್ವ ವೆಚ್ಚದ ಶತಾಂಶ |
|---|---|---|---|---|---|---|---|
| 2012–13 | 20,181 | 30,420 | 21,674 | 4,018 | 76,293 | 691,700 | 11.03 |
| 2013–14 | 24,954 | 32,622 | 26,593 | 5,021 | 89,190 | 817,886 | 10.90 |
| 2014–15 | 28,266 | 39,366 | 29,971 | 6,011 | 103,614 | 921,788 | 11.24 |
